# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ

VII

ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VII (Advanced Text) - Part II

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT Kerala
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA - VII AT - PART 2

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairperson**

| | |
|---|---|
| Dr. Shridhara N. | Associate Professor, Govt. College, Kasaragod |

**Experts**

| | |
|---|---|
| Dr . Mahalinga Bhat K. | Associate Prof, St. Aloysius College, Mangalore |
| Ramanna D. | Rtd. Head Master, GVHSS Delampady |

**Participants**

| | |
|---|---|
| Padma Nayana N.K. | Rtd. H.M. S.V.V.A.U.P. School Kodlamogaru |
| Ravi Kumar K. | HSST Kannada, GHSS Kumbla |
| Jyothsna K. | UPST, NHSS Peradala |
| Pushparaj Shetty B. | UPST, ASBS Ichlampady |
| Shridhara Bhat B. | UPST, GHS Peradala |
| Praveen. | UPST, GHSS Paivalike Nagar |
| Shailaja. | UPST, GVHSS Delampady |
| Gururaj K. | UPST, GHS Udyawar |

**Artists**

| | |
|---|---|
| Balasubrahmanya. | Rtd. Drawing Teacher, MSCHS Neerchal |
| Sathyanarayana Aila. | Drawing Teacher, GHSS Mangalpady |
| Jayaprakash Shetty. | Drawing Teacher, SATHSS Manjeshwar |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 4. | ಜ್ಞಾನ ಯಾನ | 73-101 |
| | ತಲಕಾಡಿನ ವೈಭವ (ಪ್ರವಾಸ ಕಥನ) | |
| | ಚಂದ್ರಯಾನಿಗಳಿಗೆ (ಕವನ) | |
| | ದೋಣಿ ಹರಿಗೋಲುಗಳಲ್ಲಿ (ಅನುಭವ ಕಥನ) | |
| 5. | ಸುರಕ್ಷೆ - ಶ್ರೀರಕ್ಷೆ | 102-122 |
| | ತ್ಸುನಾಮಿ ಕಥೆ (ಸಣ್ಣ ಕಥೆ) | |
| | ಸಾಲ (ನೀಳ್ಗತೆ) | |
| | ಪರರಿಗೆ ಮುದವನಾಚರಿಸುವುದು ಗುಣವು (ನಡುಗನ್ನಡ ಕಾವ್ಯ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.



# 4. ಜ್ಞಾನ ಯಾನ

ದೇಶ ಸುತ್ತಿ ನೋಡು - ಕೋಶ ಓದಿ ನೋಡು ಎಂಬ ಮಾತಿನಂತೆ ನಾವು ತೀರ್ಥಯಾತ್ರೆ, ಪ್ರಕೃತಿ ವೀಕ್ಷಣೆ, ಶೈಕ್ಷಣಿಕ ಅರಿವು, ಮನೋರಂಜನೆ ಮೊದಲಾದ ಉದ್ದೇಶಗಳಿಗಾಗಿ ದೇಶ ವಿದೇಶಗಳ ಪ್ರವಾಸ ಕೈಗೊಂಡು ಲೋಕಾನುಭವ ಪಡೆಯುತ್ತಿದ್ದೇವೆ. ತಾವು ಪಡೆದ ಅನುಭವಗಳನ್ನು ಬರೆದು ಪ್ರಕಟಿಸಿ ಇತರರಿಗೂ ಮಾರ್ಗದರ್ಶನವಾಗುವಂತೆ ಮಾಡುವ ಕಾರ್ಯವನ್ನು ಕೆಲವು ಸಾಹಿತಿಗಳು, ಕವಿಗಳು ಮಾಡುತ್ತಾ ಬಂದಿರುತ್ತಾರೆ. ಇಂದು ಕನ್ನಡ ಸಾಹಿತ್ಯದಲ್ಲಿ 'ಪ್ರವಾಸ ಕಥನ'ವು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ಇದು ವಾಚಕರಿಗೆ ಪ್ರವಾಸದ ಮಾಹಿತಿಯನ್ನು ಕಟ್ಟಿಕೊಡುತ್ತದೆ. ಈ ಸಾಹಿತ್ಯವನ್ನು ಸ್ಥಳೀಯ ಪ್ರವಾಸ, ದೇಶೀಯ ಪ್ರವಾಸ ಮತ್ತು ವಿದೇಶಿ ಪ್ರವಾಸವೆಂದು ಮೂರು ಭಾಗಗಳಾಗಿ ಮಾಡಿ ಅಧ್ಯಯನ ಮಾಡುವಷ್ಟು ಸಮರ್ಥವಾಗಿ ಪ್ರವಾಸ ಸಾಹಿತ್ಯ ಬೆಳೆದಿದೆ.

## ಪ್ರವೇಶ ಚಟುವಟಿಕೆ

- ಕೆಳಗಿನ ಚಿತ್ರಗಳನ್ನು ಗಮನಿಸಿರಿ. ನಿಮ್ಮ ಅಭಿಪ್ರಾಯಗಳನ್ನು ಚರ್ಚಿಸಿರಿ.







# ತಲಕಾಡಿನ ವೈಭವ

- ಹಿರೇಮಲ್ಲೂರು ಈಶ್ವರನ್

೧೯೫೦ ನೆಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ ೨೦ ನೆಯ ತಾರೀಖು, ಶಿವನ ಸಮುದ್ರದ ಪ್ರವಾಸಿಗರ ಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ, ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡದ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಮನೆಯನ್ನು ಕೂಡಲೆ ಖಾಲಿ ಮಾಡಿಸಿದರು, ಹಾಸಿಗೆ ಹಾಸಿಕೊಟ್ಟರು. ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್ ನೈಟ್' ಅಂದರು, ಸುಬ್ರಹ್ಮಣ್ಯಮ್ ನೌಕರರೇನೋ ಅಹುದು, ಆದರೆ ಅವರಿತ್ತ ಸ್ವಾಗತ, ವಿಶ್ವಾಸದ ನುಡಿ ನೆನೆದರೆ ನಾವು ಸುಬ್ರಹ್ಮಣ್ಯರಿಗಿಂತ ಸಣ್ಣವರು ಎನ್ನುವಲ್ಲಿ ಸಂದೇಹವಿಲ್ಲ!



ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು
ಕಂಬನಿಯ ಮಾಲೆಯನು ಎದೆಯ
ಬಟ್ಟಲೊಳಿಟ್ಟು ಧನ್ಯತೆಯ ಕುಸುಮಗಳ ಅರ್ಪಿಸಿಲ್ಲಿ.
- ಕುವೆಂಪು

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ, ಕನ್ನಡ ಸಾಹಿತ್ಯದ ಕಥನವಿದೆ, ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ, ಸುಮಾರು ಕ್ರಿ.ಶ. ೫೦೦ರ ಹೊತ್ತಿಗೆ ಕೋಲಾರದಿಂದ ಹರಿವರ್ಮನು ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರು ಬಾಳಿಬದುಕಿದ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ. ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಭೋದಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ, ಸ್ವತಃ ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ? ತಲಕಾಡಿನ ಮಣ್ಣನ್ನು! ಇಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ, ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನ.

ಗಂಗವಾಡಿಯು ಹಬ್ಬಿ, ಕನ್ನಡದ ಬಾವುಟವನ್ನು ಬಿತ್ತರದ ಬಾನಿನೆಡೆ ಹಾರಿಸುತ್ತ "ಓಹೋ! ಕನ್ನಡನಾಡು, ಆಹಾ! ಕನ್ನಡನುಡಿ, ಹಾರಿಸಿ, ತೋರಿಸಿ ಕೆಚ್ಚೆದೆಯ ಬಾವುಟ" ಎಂದು ಹಾಡುತ್ತಿರುವ ಹೊತ್ತಿಗೆ ಚೋಳ ದೇಶದ ಕಡೆಯಿಂದ ಬಿರುಗಾಳಿ ಬೀಸಿತು. ಚೋಳರು ಬಂದರು, ಗುಡಿಗೋಪುರಗಳನ್ನು ಕಟ್ಟಿಸಿದರು, ರಾಜೇಶ್ವರ, ವೈಕುಂಠನಾರಾಯಣ, ಮರುಳೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ ಗುಡಿಗಳನ್ನು ಕಟ್ಟಿಸಿದರು. ೧೧೧೬ರಲ್ಲಿ ವಿಷ್ಣುವರ್ಧನ ದೊರೆಯ ಆಳ್ವಿಕೆ ಪ್ರಾರಂಭವಾಯಿತು. ವಿಷ್ಣುವರ್ಧನ ದೊರೆಯ ಕಾರ್ಯವನ್ನು ಕೇಳುತ್ತೀರಾ? ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ, ಹೊಯ್ಸಳರು ಕನ್ನಡ ಬಾವುಟವನ್ನು ಹಾರಿಸಿ, ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿಕಟ್ಟಿ ಮನೆಗೆ ಬಂದು ಗೆಲುವಿನ ಕಥನವನ್ನು ಬಣ್ಣಿಸಿಯೇ ಬಣ್ಣಿಸಿದರು. ಹೊಯ್ಸಳರು ಹೋದ ನಂತರ ವಿಜಯನಗರದ ರಾಯರು ಬಂದರು. ಮೈಸೂರಿನ ಒಡೆಯರು ಬಂದರು. ಆದರೆ ಯಾರು ಬಂದರೇನು? ಯಾರು ಹೋದರೇನು? ತಿರುಗುವ ಕಾಲಚಕ್ರವನ್ನು ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯ?

‘ನಾ ಮುಂದೆ ನೀ ಮುಂದೆ’ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತುಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್ನ ಕಣ್‌ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗಜಲದಂತೆ ಮಾಯವಾಯಿತು. ಇದು ಕೀರ್ತಿನಾರಾಯಣನ ದೇಗುಲ, ಕ್ರಿಸ್ತಶಕಾಬ್ದ ೧೧೧೭ನೆಯ ವರ್ಷದಲ್ಲಿ ವಿಷ್ಣುವರ್ಧನದೇವ ತಲಕಾಡಿನ ವಿಜಯದ ನಿಮಿತ್ತ ವೀರನಾರಾಯಣನ ಹೆಸರಿನಲ್ಲಿ ಗುಡಿ ಕಟ್ಟಿಸಿದನು.

ಕೀರ್ತಿನಾರಾಯಣ ದೇವಾಲಯದ ಆಚೆಗೆ ೧೫೦ ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯ! ಈ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವುವು. ಶೃಂಗೇರಿಯ ವಿದ್ಯಾಶಂಕರ ದೇಗುಲ, ಹಂಪೆಯ ಹಜಾರರಾಮರ ಗುಡಿ, ತಾಡಪತ್ರಿಯ ಲೇಪಾಕ್ಷಿ ಮಂದಿರ ಇವು ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ.

ಸಂಜೆ ಧಾವಿಸಿ ಬರುತ್ತಲಿದ್ದಿತು. ಕಪ್ಪುಪರದೆ ಇಳೆಯ ಮೇಲೆ ರಭಸದಿಂದ ಇಳಿಯುತ್ತಲಿದ್ದಿತು. ನಾವಾಗ ಪಾತಾಳೇಶ್ವರನ ಗುಡಿಯಿಂದ ಮರುಳೇಶ್ವರ ದೇಗುಲದೆಡೆಗೆ, ಮರುಳೇಶ್ವರನಿಂದ ಗೋಕರ್ಣೇಶ್ವರ ಅಲ್ಲಿಂದ ವೀರಭದ್ರನೆಡೆಗೆ ಮರಳಿನಲ್ಲಿ ಸಿಕ್ಕಿ ಬೀಳುತ್ತಿದ್ದ ಕಾಲುಗಳನ್ನು ಕಸುವಿನಿಂದ ಕೀಳುತ್ತ ಮುಂದಕ್ಕೆ ಬಾಗಿ ಉದ್ವೇಗ ಅನುತಾಪಗಳನ್ನು ಬೆಂದ ಹೃದಯದಲ್ಲಿರಿಸಿಕೊಂಡು ನಾಗಾಲೋಟಕ್ಕೆ ತೊಡಗಿದ್ದೆವು.

ಮೂರು ಮೈಲುಗಳಾಚೆ ವಿಜಯಪುರ, ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತಿಕ ಮಾಸ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇಲೇರುತ್ತಿದ್ದ, ದಾರಿ ಕೊರಕಲು, ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಹಳ್ಳವೊಂದು ಇದಿರಾಯಿತು. ಮೋಟಾರು ನಿಂತೇ ಬಿಟ್ಟಿತು. ಸಾರಥಿಗೆ ಹೇಳಿದೆ! ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಏನು ಮಾಡಲಿ?

ನನ್ನ ಮನದ ಇಂಗಿತವನ್ನು ಅರಿತ ಸಾರಥಿ “ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ, ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ” ಎಂದನು. ಇಬ್ಬರೂ ಹೋದೆವು. ರಾತ್ರಿ ಒಂದು ಗಂಟೆ, ಎಡಬಲಕ್ಕೆ ಶಾಲಿವನ, ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ

ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡ ಮರಗಳ ಪೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿದೆವು, ಸಮೀಪಿಸಿದೆವು, ಯುರೇಕಾ! ಯುರೇಕಾ!

ಆನಂದದ ಆವೇಶದಲ್ಲಿ ನನ್ನ ಯಾತ್ರಿಕರಿಗೆ ಕೇಳುವಂತೆ ಚೀರು ಧ್ವನಿಯಿಂದ "ಬರ್‍ರೋ ಗುಡಿ ಸಿಕ್ಕಿತು, ಬರ್‍ರೋ ದೇವಾಲಯ ದೊರಕಿತು", ಎಂದು ಕೂಗಿದೆ. ಇವರೆಲ್ಲ ಬಂದರು, ನೋಡಿದೆವು! ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು, ಗೋಕರ್ಣ ತೀರ್ಥದಲ್ಲಿ ಮಿಂದು ಐದೂ ಲಿಂಗಗಳನ್ನು ಒಂದೊಂದು ಸಾರಿ ಸಂದರ್ಶಿಸಿ ವೈದ್ಯೇಶ್ವರ ಲಿಂಗಕ್ಕೆ ವರದಿಯನ್ನೊಪ್ಪಿಸಿ ಸಂಜೆ ಮುಗಿಯುವುದರೊಳಗೆ ಪಂಚಲಿಂಗಗಳ ದರ್ಶನವನ್ನು ಪೂರೈಸಿದರೆ ಶ್ರದ್ಧಾವಂತನಾದ ಭಕ್ತನಿಗೆ ಮುಕ್ತಿ ದೊರಕುವುದೇ ನಿಜ!

ಮರುದಿನ ನೇಸರು ಬಾನಿನ ನಡುನೆತ್ತಿಯಿಂದ ಈಚೆಗೆ ಪಡುವಣಕ್ಕೆ ತಿರುಗಿ ಎರಡು ತಾಸಾಗಿದೆ. ನಾವೀಗ ಹೊಯ್ಸಳರ ನಾಡಿನಲ್ಲಿ ಸಂಚರಿಸುತ್ತಿದ್ದೇವೆ. ಕಪಿಲಾನದಿಯನ್ನು ಆ ಕಡೆಗೆ ಬಿಟ್ಟು ಈಚೆಗೆ ಉತ್ತರಾಭಿಮುಖವಾಗಿ ಹೊರಟು ಮುಂದಕ್ಕೆ ಬಂದರೆ ಹೊಯ್ಸಳ ಬಲ್ಲಾಳರ ಅಭಿಮಾನದ ಕಲಾಸಂಪದವಾಗಿ ನಿಂತಿರುವ ಅನರ್ಘ್ಯ ವಾಸ್ತುಶಿಲ್ಪ ಕಲಾರತ್ನವೊಂದನ್ನು ಕಾಣುತ್ತೇವೆ, ಅದೇ ಸೋಮನಾಥ ದೇವಾಲಯ.

ಹೊಯ್ಸಳ ಬಲ್ಲಾಳರು ಕನ್ನಡದ ಕುಲದೀಪಕರು. ಕ್ರಿಸ್ತಶಕಾಬ್ದ ಸಾವಿರದ ಇಸವಿಯಿಂದ ಹದಿಮೂರು ನೂರರವರೆಗೆ ಎಂದರೆ ಅಖಂಡ ಮೂನ್ನೂರು ವರ್ಷಗಳ ಪರ್ಯಂತ ಕನ್ನಡದ ನಂದಾದೀವಿಗೆಯನ್ನು ಹಚ್ಚಿ ನಾಡುನುಡಿಯನ್ನು ಸಂರಕ್ಷಿಸಿದರು. ಈ ವಂಶದ ಮೂಲಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮಸ್ಥಳ. ಆಗಿನ ಸೊಸೆವೂರಿಗೆ ಈಗ ಅಂಗಡಿ ಎಂದು ಮರುನಾಮಕರಣವಾಗಿದೆ. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ, ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಂದು ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್‌ಸಳ ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದನೆಂದೂ ತಿಳಿಯುವುದು. ಅಂದಿನಿಂದ ಸಳನ ಮನೆತನಕ್ಕೆ ಹೊಯ್ಸಳ ಎಂಬ ಹೆಸರು ಬಂದಿತು.

ಕವಿಕಂಡ ಸತ್ಯ, ಶಿಲ್ಪಿ ಕಂಡ ಸೌಂದರ್ಯಗಳೇ ನಮ್ಮ ಬಾಳಿನ ಅಲಂಕಾರ.

### ಲೇಖಕರ ಪರಿಚಯ



ಹಿರೇಮಲ್ಲೂರು ಈಶ್ವರನ್ (೧೧.೦೧.೧೯೨೨ – ೨೨.೦೬.೧೯೯೮) ಅವರ ಊರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರು. ಸಮಾಜಶಾಸ್ತ್ರಜ್ಞರಾದ ಇವರು ಅಂತಾರಾಷ್ಟ್ರೀಯ ಪುರಸ್ಕೃತ ಸಾಹಿತಿ. ಲಿಂಗರಾಜ ಮಹಾವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದ ಇವರು ಕೊಲ್ಲಾಪುರದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಆರಂಭಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಈಶ್ವರನ್ ಅವರು ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಕವಿ ಕಂಡ ನಾಡು (ಪ್ರವಾಸ ಕಥನ), ವಿಷನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕತೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನ ಬುಟ್ಟಿ, ತಾಯಿನೋಟ ಮೊದಲಾದವು ಇವರ ಕೃತಿಗಳು, ಶ್ರೀಯುತರ 'ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ' ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ದೊರಕಿದೆ. ಹಿರೇಮಲ್ಲೂರು ಈಶ್ವರನ್ ಅವರ 'ಕವಿಕಂಡ ನಾಡು' ಪ್ರವಾಸ ಕಥನ (ಪುಟ ೦೧-೨೦) ದಿಂದ ಪ್ರಕೃತ ಭಾಗವನ್ನು ಆರಿಸಲಾಗಿದೆ.

### ವಿಶದೀಕರಣ

**ಮೃಗಜಲ :** ವಿಶಾಲ ಮರುಭೂಮಿಯಲ್ಲಿ, ಸಮತಟ್ಟಾದ ಬಟ್ಟಬಯಲಿನಲ್ಲಿ ನೀರಿಲ್ಲದಿದ್ದರೂ ಬಿಸಿಲಿನ ಝಳದಿಂದಾಗಿ ದೂರದಿಂದ ನೋಡುವಾಗ ನೀರಿದ್ದಂತೆ ಭಾಸವಾಗುವುದು. ಇದನ್ನು ಕಂಡು ಬಿಸಿಲಿನ ಝಳಕ್ಕೆ ಕಂಗಾಲಾಗಿ ಬಾಯಾರಿದ ಪ್ರಾಣಿಗಳು ನೀರು ಸಿಕ್ಕಿತೆಂದು ಸಂತೋಷದಿಂದ ಬಂದಾಗ ನಿರಾಶೆಗೆ ಒಳಗಾಗುತ್ತವೆ. ಮತ್ತೆ ಮುಂದೆ ನೋಡುತ್ತವೆ. ಆಗ ಅನತಿ ದೂರದಲ್ಲಿ ನೀರಿದ್ದಂತೆ ಕಂಡು ಓಡುತ್ತವೆ. ಅಲ್ಲಿಯೂ ನೀರು ಕಾಣದೆ ನಿರಾಶೆಗೊಳ್ಳುತ್ತವೆ. ಹೀಗೆ ನೀರಿಲ್ಲದ ಜಾಗದಲ್ಲಿ ನೀರಿದ್ದಂತೆ ಭಾಸವಾಗುವುದೇ ಮೃಗಜಲ.

**ಯುರೇಕಾ :** ಗ್ರೀಸ್ ದೇಶದ ಆರ್ಕಿಮಿಡಿಸ್ ಸ್ನಾನದ ತೊಟ್ಟಿಯಲ್ಲಿ ಸ್ನಾನಕ್ಕಾಗಿ ಇಳಿದಾಗ ಸ್ವಲ್ಪ ನೀರು ಹೊರಗೆ ಚೆಲ್ಲಿತು. ನೀರು ಚೆಲ್ಲಲು ಕಾರಣವೇನಿರಬಹುದೆಂದು ಚಿಂತಿಸಿದಾಗ ತನ್ನನ್ನು ಕಾಡುತ್ತಿದ್ದ ಕಿರೀಟದ ಸಮಸ್ಯೆಗೆ ಪರಿಹಾರ ದೊರೆಯಿತು. ತಕ್ಷಣ ಯುರೇಕಾ (ತಿಳಿಯಿತು, ಸಿಕ್ಕಿತು) ಎಂದು ಬೊಬ್ಬಿಡುತ್ತಾ ಓಡಿದನು. ಅದೇ ರೀತಿ ಇಲ್ಲಿ ಲೇಖಕರು ಮತ್ತು ವಾಹನ ಚಾಲಕರು ವಿಜಯಪುರದ ಅರ್ಕೇಶ್ವರನ ಗುಡಿಯನ್ನು ಹುಡುಕುತ್ತಾ ಹೋಗಿ ಸಿಕ್ಕಿದಾಗ ಯುರೇಕಾ ಎಂದು ಕೂಗಿಕೊಂಡರು.

**ಕ್ರಿಸ್ತಶಕಾಬ್ದ** : ಕ್ರಿಸ್ತ ಹುಟ್ಟಿದ ಕಾಲದಿಂದ ಆರಂಭವಾದ ಶಕೆ / ವರ್ಷ

## ಚಟುವಟಿಕೆಗಳು

### ಉತ್ತರಿಸಿರಿ

- ‘ರಾಯ’ ಎಂದು ಯಾರನ್ನು ಕರೆಯುತ್ತಿದ್ದರು?
- ಲೇಖಕರು ಯುರೇಕಾ ಎಂದು ಚೀರಿದ್ದು ಯಾಕೆ?
- ಸಳನ ಮನೆತನಕ್ಕೆ ‘ಹೊಯ್ಸಳ’ ಎನ್ನುವ ಹೆಸರು ಹೇಗೆ ಬಂತು?
- ವೈದ್ಯೇಶ್ವರ ದೇವಾಲಯದ ವಿಶೇಷತೆಯೇನು?

### ದಿನಚರಿ ಬರವಣಿಗೆ

‘ತಲಕಾಡಿನ ವೈಭವ’ ಪಾಠಭಾಗವನ್ನು ಓದಿದಿರಲ್ಲವೇ? ಇದರ ಹಿನ್ನೆಲೆಯಲ್ಲಿ ನೀವು ಒಂದು ಐತಿಹಾಸಿಕ ಪ್ರದೇಶಕ್ಕೆ ಪ್ರವಾಸ ಹೋಗಿದ್ದಾಗ ನಿಮಗಾದ ಅನುಭವಗಳನ್ನು ಮತ್ತು ಅಲ್ಲಿನ ವೈಶಿಷ್ಟ್ಯಗಳನ್ನು ನಿಮ್ಮ ದಿನಚರಿಯಲ್ಲಿ ಬರೆಯಿರಿ.

### ಪ್ರವಾಸ ಕಥನ

ನೀವು ಕೈಗೊಂಡ ಒಂದು ಪ್ರವಾಸದ ಅನುಭವವನ್ನು ಪ್ರವಾಸಕಥನ ರೂಪದಲ್ಲಿ ಬರೆಯಿರಿ. ನಿಮ್ಮ ತರಗತಿಯಲ್ಲಿ ಎಲ್ಲರೂ ಬರೆದ ಪ್ರವಾಸ ಕಥನಗಳನ್ನು ಸಂಗ್ರಹಿಸಿ ಸಂಚಿಕೆಯೊಂದನ್ನು ತಯಾರಿಸಿರಿ.

### ಟಿಪ್ಪಣಿ ಬರೆಯಿರಿ

ಪ್ರತಿಯೊಂದು ಊರಿನ ಹೆಸರಿನ ಹಿಂದೆ ಒಂದು ಹಿನ್ನೆಲೆ ಇದೆ. ನಿಮ್ಮ ಊರಿನ ಹೆಸರಿನ ಹಿನ್ನೆಲೆಯನ್ನು ಹಿರಿಯರಲ್ಲಿ ಕೇಳಿ ತಿಳಿದು ಟಿಪ್ಪಣಿ ಬರೆಯಿರಿ.

### ಓದುಗರ ಓಲೆ

ಪ್ರೇಕ್ಷಣೀಯ ಸ್ಥಳಗಳಲ್ಲಿ ಸಂದರ್ಶಕರಿಗೆ ಹೆಚ್ಚಿನ ಸೌಲಭ್ಯ ಲಭ್ಯವಾಗುವಂತೆ ಮಾಡುವತ್ತ ಸರಕಾರದ ಗಮನ ಸೆಳೆಯಲು ಪತ್ರಿಕೆಗೆ ಓದುಗರ ಓಲೆಯೊಂದನ್ನು ಬರೆಯಿರಿ.

## ನಾಮ ವಿಶೇಷಣ

**ಕನ್ನಡಕ್ಕಾಗಿ ಹೋರಾಡಿ ಮಡಿದ ಅನೇಕರ ಉಜ್ವಲ ಚರಿತ್ರೆ ಇದೆ.**

ಈ ವಾಕ್ಯದಲ್ಲಿ 'ಚರಿತ್ರೆ' ಎಂಬ ನಾಮಪದವನ್ನು 'ಉಜ್ವಲ' ಎನ್ನುವ ಪದವು ವಿಶೇಷಿಸುತ್ತದೆ. ಈ ರೀತಿ ಒಂದು ನಾಮಪದ ಅಥವಾ ನಾಮಪದ ಗುಚ್ಛವನ್ನು ವಿಶೇಷಿಸುವ ಪದವನ್ನು 'ನಾಮ ವಿಶೇಷಣ' ಎನ್ನುವರು.

ಈ ಕೆಳಗಿನ ಸಾಲುಗಳಲ್ಲಿ ನಾಮ ವಿಶೇಷಣಗಳಿಗೆ ಅಡಿಗೆರೆ ಹಾಕಿರಿ.

- ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು.
- ಗಂಗವಾಡಿಯು ಹಬ್ಬಿ, ಕನ್ನಡದ ಭವ್ಯ ಬಾವುಟವನ್ನು ಬಾನಿನೆಡೆ ಹಾರಿಸಿತು.
- ಅವರು ಹಾರಿಸಿ ತೋರಿಸಿ ಕೆಚ್ಚೆದೆಯ ಬಾವುಟ ಎಂದು ಹಾಡಿದರು.

## ಕ್ರಿಯಾವಿಶೇಷಣ

ಈ ಕೆಳಗಿನ ವಾಕ್ಯವನ್ನು ಓದಿರಿ.

**ಸುಬ್ರಮಣ್ಯಂ ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದರು.**

ಈ ಮೇಲಿನ ಸಾಲಿನಲ್ಲಿ 'ಸ್ವಾಗತಿಸಿದರು' ಎನ್ನುವ ಕ್ರಿಯಾಪದವನ್ನು 'ಆತ್ಮೀಯವಾಗಿ' ಎನ್ನುವ ಪದವು ವಿಶೇಷಿಸುತ್ತದೆ. ಹೀಗೆ ಕ್ರಿಯೆಯನ್ನು ವಿಶೇಷಿಸುವ ಪದವನ್ನು 'ಕ್ರಿಯಾ ವಿಶೇಷಣ' ಎನ್ನುವರು.

ಈ ಕೆಳಗಿನ ಸಾಲುಗಳಲ್ಲಿ 'ಕ್ರಿಯಾ ವಿಶೇಷಣ'ಕ್ಕೆ ಅಡಿಗೆರೆ ಎಳೆಯಿರಿ.

- ಸೈನಿಕರು ಯುದ್ಧಭೂಮಿಯಲ್ಲಿ ಜೋರಾಗಿ ಜೈಕಾರ ಹಾಕಿದರು.
- ದನಕರುಗಳು ಸಂಜೆ ಮನೆಯ ಕಡೆಗೆ ವೇಗವಾಗಿ ಬರುತ್ತಿದ್ದುವು.
- ದಾರಿಯಲ್ಲಿ ಹಾವನ್ನು ಕಂಡಾಗ ಎದೆ ಜೋರಾಗಿ ಹಾರತೊಡಗಿತು.
- ಕಪ್ಪು ಪರದೆ ಇಳೆಯ ಮೇಲೆ ರಭಸವಾಗಿ ಇಳಿಯುತ್ತಿತ್ತು.

## ಪದ ರಚಿಸಿರಿ

ಕೆಳಗಿನ ಪಟ್ಟಿಯಲ್ಲಿರುವ ಅಕ್ಷರಗಳನ್ನು ಬಳಸಿ ಅರ್ಥಪೂರ್ಣವಾದ ಪದಗಳನ್ನು ರಚಿಸಿರಿ.

| | | | | | |
|---|---|---|---|---|---|
| ಕಿ | ಶ | ದೇ | ರಾ | ಕಾ | ಅ |
| ವಾ | ಚಾ | ಜ | ತ | ಉ | ಗ |
| ಪ | ಣಿ | ತಿ | ಧಾ | ನಿ | ವ |
| ನಾ | ಮಾ | ನ | ಲ | ಹಾ | ಟ |
| ಯ | ರ | ಕ್ರ | ಲ | ಚ | ಮ |
| ಲೋ | ಕೆ | ಗಾ | ಸ | ರಿ | ಕಿ |

# ಚಂದ್ರಯಾನಿಗಳಿಗೆ

- ಡಾ.ರಮಾನಂದ ಬನಾರಿ

ಗಗನದೆತ್ತರಕೇರಿ ಚಂದ್ರಲೋಕವ ಸೇರಿ
ನಮ್ಮೂರ ನಿರುಕಿಸುವ ಸಾಹಸಿಗಳೆ
ಜಗದ ಹರ್ಷದ ಭೇರಿ ಬಾರಿಸಿದೆ ಬಹುಬಾರಿ
ನಗುತ ಕೈಮುಗಿಯುವೆವು ನಿಮಗೀಗಲೆ

ಮಾನವ ಮಹತ್ವ ಸಾಧನೆಗೊಂದು ಸಂಕೇತ
ನೀವೇರಿದೆತ್ತರವು ಬಾಳಿನಲ್ಲಿ
ಆರು ಅರಿತಿಹರಿದರ ಉತ್ತರವ ಮೀರಿಸಲು
ಹುಟ್ಟಿ ಬರಬಹುದೊಬ್ಬ ನಾಳಿನಲ್ಲಿ

ಸ್ವರ್ಗಲೋಕದ ಸಿರಿಯ ಸಂಪದವನಳೆದವರ
ಅಂತೆ ಕಂತೆಗಳ ಕಥೆ ಹೇಳಿರುವೆವು
ಏಳೇಳು ಹದಿನಾಲ್ಕು ಲೋಕಗಳನಾಳಿದರ
ಏಳು ಬೀಳುಗಳ ಕಥೆ ಕೇಳಿರುವೆವು

ಕಥೆಗಿಂತ ವಾಸ್ತವವೆ ಆಶ್ಚರ್ಯವೆನ್ನುವುದ
ಸಾಧಿಸಿದಿರೀ ಜಗವೆ ಕಾಣುವಂತೆ
ಕಂಡೆವೆಲ್ಲರು ನಿಮ್ಮ ಸಾಹಸದ ಸಂಭ್ರಮವ
ಸೂರ್ಯ ಚಂದ್ರರೆ ಸಾಕ್ಷಿಯೆನ್ನುವಂತೆ

ಒಳಿತನ್ನೆ ಪೆಸರಿಸಿರಿ, ಒಳಿತನ್ನೆ ಪಸರಿಸಿರಿ
ಒಳಿತಲ್ಲಿ ಇದ್ದರೊಂದಿಷ್ಟು ತನ್ನಿ
ಬುವಿಯ ಬಾಳಿನ ಕಹಿಯ ಸಹಿಯನಲ್ಲೊತ್ತದಿರಿ
ಸಿಹಿಯನೊಂದನೆ ಬಿಟ್ಟು ಕೆಳಗೆ ಬನ್ನಿ

ಚಂದ್ರಲೋಕದ ಒಳಿತು ಇಳಿದು ಬರಲೀ ಧರೆಗೆ
ಇಲ್ಲಿನಾ ಕೆಡುಕಲ್ಲಿಗೇರದಿರಲಿ
ಅಲ್ಲಿ ಏನಾದರೂ ಕೆಡುಕು ಇದ್ದರೆ ಮತ್ತೆ
ನಿಮ್ಮೊಂದಿಗೇ ಇಳಿದು ಬಾರದಿರಲಿ




ದ್ವೇಷ ವೈಷಮ್ಯಗಳ ಬಿತ್ತ ಬಿತ್ತಲು ಬೇಡಿ
ಸ್ನೇಹ ಸೌಹಾರ್ದಗಳ ಬಿತ್ತರಿಸಿರಿ
ಚಂದ್ರನಷ್ಟೇ ತಂಪು ಚಂದ್ರ ಜೀವನವಾಗಿ
ಚಂದ್ರನಲ್ಲಾದರೂ ಶಾಂತಿಯಿರಲಿ

### ಕವಿ ಪರಿಚಯ



ಡಾ. ರಮಾನಂದ ಬನಾರಿಯವರು ೧೯೪೦ ರ ಜೂನ್ ೪ರಂದು ಕಾಸರಗೋಡು ತಾಲೂಕಿನ ಕೀರಿಕ್ಕಾಡು ಎಂಬಲ್ಲಿ ವಿಷ್ಣುಭಟ್ಟ ಮತ್ತು ಪರಮೇಶ್ವರಿ ಅಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ವೃತ್ತಿಯಲ್ಲಿ ವೈದ್ಯರಾಗಿರುವ ಇವರು ಪ್ರವೃತ್ತಿಯಲ್ಲಿ ಕವಿಗಳಾಗಿದ್ದಾರೆ. 'ಎಳೆಯರ ಗೆಳೆಯ' ಇವರ ಶಿಶುಗೀತೆಗಳ ಸಂಕಲನವಾಗಿದೆ. ತೊಟ್ಟಿಲು, ಕವಿತೆಗಳೇ ಬನ್ನಿ, ಜೀವವೃಕ್ಷ, ನೋಟದೊಳಗಿನ ನೋಟ, ನಮ್ಮಿಬ್ಬರ ನಡುವೆ ಇವು ಇವರ ಕೆಲವು ಕವನ ಸಂಕಲನಗಳಾಗಿವೆ. ಗುಟುಕುಗಳು, ಬಿಂದುಗಳು, ಮಧು ಸಿಂಚನ, ಕದಿರುಗಳು, ಕೊಳಲು ಇವರ ಚುಟುಕ ಮತ್ತು ಹನಿಗವನ ಸಂಕಲನಗಳಾಗಿವೆ. ನಿಯತಕಾಲಿಕೆಗಳಲ್ಲೂ ಅವರ ಕವಿತೆಗಳು ಆಗಾಗ ಪ್ರಕಟವಾಗುತ್ತಾ ಇವೆ. ಯಕ್ಷಗಾನದಲ್ಲಿ ಅಪಾರ ಆಸಕ್ತಿಯಿರುವ ಬನಾರಿಯವರು ಉತ್ತಮ ಅರ್ಥಧಾರಿಗಳಾಗಿದ್ದಾರೆ. 'ಚಂದ್ರಯಾನಿಗಳಿಗೆ' ಎಂಬ ಕವನವನ್ನು ಬನಾರಿಯವರ 'ಪರಾಗಸ್ಪರ್ಶ' ಎಂಬ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಚಟುವಟಿಕೆಗಳು

### ಹಾಡಿರಿ

'ಚಂದ್ರಯಾನಿಗಳಿಗೆ' ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ಚಂದ್ರಯಾನವು ಯಾವುದರ ಸಂಕೇತ ಎಂದು ಕವಿ ಅಭಿಪ್ರಾಯಪಡುತ್ತಾರೆ?
- ಮಾನವರ ಸಾಧನೆಗೆ ಯಾರು ಸಾಕ್ಷಿಯಾಗುವರು?
- ಚಂದ್ರನಿಂದ ಏನನ್ನು ತರಬೇಕೆಂದು ಕವಿ ತಿಳಿಸುತ್ತಾರೆ?
- ಪದ್ಯಕ್ಕೆ ಸೂಕ್ತವಾದ ಇನ್ನೊಂದು ಶೀರ್ಷಿಕೆಯನ್ನು ನೀಡಿರಿ.
- ಈ ಕವನದ ಮೂಲಕ ಕವಿಯು ನೀಡುವ ಸಂದೇಶವೇನು?

## ವಿರುದ್ಧಾರ್ಥ ಪದಗಳು

"ಚಂದ್ರಲೋಕದ ಒಳಿತು ಇಳಿದು ಬರಲೀ ಧರೆಗೆ ಇಲ್ಲಿನಾ ಕೆಡುಕಲ್ಲಿಗೇರದಿರಲಿ"

ಪದ್ಯದ ಸಾಲನ್ನು ಗಮನಿಸಿರಿ. ಒಳಿತು ಕೆಡುಕು ಇವು ಪರಸ್ಪರ ವಿರುದ್ಧಾರ್ಥಕ ಪದಗಳಾಗಿವೆ. ಇಂತಹ ವಿರುದ್ಧಾರ್ಥಕ ಪದಗಳನ್ನು ಪದ್ಯದಿಂದ ಕಂಡುಹಿಡಿದು ಪಟ್ಟಿ ಮಾಡಿರಿ.

## ಸಾಲು ಗುರುತಿಸಿರಿ

ಈ ಕೆಳಗಿನ ಆಶಯ ಬರುವ ಸಾಲುಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.

- ನಾವು ಸ್ವರ್ಗಲೋಕದ ಬಗ್ಗೆ ಪುರಾಣಕತೆಗಳಲ್ಲಿ ಕೇಳಿ ತಿಳಿದಿದ್ದೇವೆ.
- ಚಂದ್ರಯಾನವು ಮನುಷ್ಯರು ಮಾಡಿದ ಸಾಹಸದ ಹೆಗ್ಗುರುತಾಗಿದೆ.
- ಹಿಂದೆ ನಮ್ಮನ್ನಾಳಿದ ರಾಜರ ಕಥೆಗಳು ನಮಗೆ ತಿಳಿದಿವೆ.
- ದ್ವೇಷವನ್ನು ಹರಡಬೇಡಿ ಒಲವನ್ನು ಹಂಚಿರಿ.

## ಆಶಯ ಬರೆಯಿರಿ

ಪದ್ಯವನ್ನು ಹಾಡಿ ಆಸ್ವಾದಿಸಿರುವಿರಲ್ಲವೇ? ಪದ್ಯದ ಆಶಯ ಬರೆಯಿರಿ.

## ಹೋಲಿಕೆಯ ಟಿಪ್ಪಣಿ

'ಚಂದ್ರಯಾನಿಗಳಿಗೆ' ಕವನದೊಂದಿಗೆ ಕೆಳಗಿನ ಪದ್ಯವನ್ನು ಹೋಲಿಸಿ ಸಾಮ್ಯ ವ್ಯತ್ಯಾಸಗಳನ್ನು ಬರೆಯಿರಿ.

ಕೋಟಾದಿಂದ ಹಾರಿಸಿ ಬಿಡುವುದು
ಬಾಹ್ಯಾಕಾಶ ಕೇಂದ್ರ
ಏರುತ ಏರುತ ಬಾನ ಬಂಡಿಯು
ಮುಟ್ಟಲೆಂದು ಚಂದ್ರ
ಚಂದ್ರಯಾನಕ್ಕೆ ಸಿದ್ಧವಾಗಿದೆ
ಪ್ರಗ್ಯಾನ್ ವ್ಯೋಮನೌಕೆ.
ಆರು ಚಕ್ರದ ರೋವರ್ ನಲ್ಲಿ

ಸೌರ ಶಕ್ತಿಯ ಬಳಕೆ
ಕಕ್ಷೆಗೆ ಹೊತ್ತು ಒಯ್ಯುತಲಿಹುವುದು
ಜಿ.ಯಸ್.ಯಲ್. ವಿ ಮಾರ್ಕು
ಲಕ್ಷ ಕಿಲೋಮೀಟರ್ ಎತ್ತರಕ್ಕೆ
ಹಾರಿಸಿಬಿಟ್ಟರೆ ಸಾಕು
ಬಾಹುಬಲಿವೀರ ರಾಕೆಟ್ ನಿಂದ
ಚಂದ್ರನ ದಕ್ಷಿಣ ಧ್ರುವಕ್ಕೆ
ಜೋಕೆಯಿಂದ ಇಳಿಸಿ ಬಿಡುವುದು
ವಿಕ್ರಂ ಲ್ಯಾಂಡರ್ ನೆಲಕೆ
ದೊಡ್ಡ ಕಂದರ ಚಂದ್ರ ಕುಳಿಯಲಿ
ತಿರುಗಿ ಅತ್ತ ಇತ್ತ
ದಿನವು ದಿನವು ಕಳಿಸಲಿರುವುದು
ವಿಸ್ಮಯ ಬೆರಗಿನ ಚಿತ್ರ
ಭಾರತ ದೇಶದ ಅರಿಮೆಯ ಕಳಸಕೆ
ಮುಡಿಪು ನನ್ನ ಕವನ
ಇಸ್ರೋ ಸಂಸ್ಥೆಗೆ ಸಲ್ಲಿಸಬೇಕು
ಈಗಿಂದೀಗಲೇ ನಮನ

**- ಚಂದ್ರಗೌಡ ಕುಲಕರ್ಣಿ**

## ವ್ಯಕ್ತಿ ಪರಿಚಯ ಬರೆಯಿರಿ

'ಚಂದ್ರಯಾನಿಗಳಿಗೆ' ಕವನದಲ್ಲಿ ಕವಿಗಳು ಬಾಹ್ಯಾಕಾಶ ಯಾತ್ರಿಕರನ್ನು ಸಾಹಸಿಗಳೆಂದು ಹೆಸರಿಸಿದ್ದಾರೆ. ಬಾಹ್ಯಾಕಾಶ ಯಾನ ಮಾಡಿದ ಸಾಹಸಿಗಳ ವಿವರಗಳನ್ನು ಸಂಗ್ರಹಿಸಿ ವ್ಯಕ್ತಿ ಪರಿಚಯ ಬರೆಯಿರಿ.

## ಪ್ರಶ್ನಾವಳಿ ತಯಾರಿಸಿರಿ

ಹಲವಾರು ವಿಜ್ಞಾನಿಗಳ ಅವಿರತ ಪರಿಶ್ರಮದಿಂದ ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದೆ. ಈ ರೀತಿ ಸಾಧನೆ ಮಾಡಿದ ಒಬ್ಬ ವಿಜ್ಞಾನಿಯ ಜೊತೆ ಸಂದರ್ಶನ ನಡೆಸಲು ಬೇಕಾದ ಪ್ರಶ್ನಾವಳಿಯನ್ನು ತಯಾರಿಸಿರಿ.

## ಪದ್ಯ ಮುಂದುವರಿಸಿರಿ

ಈ ಕೆಳಗಿನ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

ನೀಲಿಯ ಬಾನಲಿ
ಹೊಳೆಯುವ ಚಂದಿರ
............................
............................
............................
............................
............................

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಿರುವ ಕವನದ ಸಾಲುಗಳ ಸ್ವಾರಸ್ಯ ಬರೆಯಿರಿ.

ದ್ವೇಷ ವೈಷಮ್ಯಗಳ ಬಿತ್ತ ಬಿತ್ತಲು ಬೇಡಿ
ಸ್ನೇಹ ಸೌಹಾರ್ದಗಳ ಬಿತ್ತರಿಸಿರಿ
ಚಂದ್ರನಷ್ಟೇ ತಂಪು ಚಂದ್ರ ಜೀವನವಾಗಿ
ಚಂದ್ರನಲ್ಲಾದರೂ ಶಾಂತಿಯಿರಲಿ

## ಮಾಹಿತಿ ಸಂಗ್ರಹಣೆ

ಬಾಹ್ಯಾಕಾಶ ಯಾನದ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.

# ದೋಣಿ ಹರಿಗೋಲುಗಳಲ್ಲಿ

**- ಡಾ.ಕೆ.ಶಿವರಾಮ ಕಾರಂತ**



ನೆಲ, ಜಲ, ವಾಯು ಸಂಚಾರಗಳಲ್ಲಿ ಒಂದೊಂದರ ಸೊಗಸು ಒಂದೊಂದಕ್ಕಿದೆ. ಜೀವದ ಹೆದರಿಕೆ ಇರುವವರಿಗೆ ವಾಯು ಸಂಚಾರ ಸ್ವಪ್ನದಲ್ಲಿ ಒಳ್ಳೆಯದು, ಬೆನ್ನೆಲುಬಿನ ಆಸೆಯಿರುವವನಿಗೆ ನಮ್ಮ ಮುರುಕಲು ಮೋಟಾರು ರಸ್ತೆಗಳ ಪ್ರಯಾಣವೂ ಬೇಡ; ರೈಲಿನ ಗುದ್ದಾಟವೂ ಬೇಡ, ಸುಖ ಸಂತೋಷಗಳಿಗೆ ಹೇಳಿಸಿದ್ದು, ಜಲಯಾನ. ನೀವು ಸಪ್ತಸಾಗರಗಳನ್ನೇ ದಾಟಿಹೋಗಿ ಊರಿನ ಹೊಳೆಯಲ್ಲೇ ತೇಲಿ ಹೋಗಿ, ಬೆನ್ನಿನ ಸೌಖ್ಯಕ್ಕೂ ಅದೇ ಬೇಕು ; ಕಣ್ಣಿನ ಸುಖಕ್ಕೂ ಅದೇ ಬೇಕು.

ನಾನು ಎಳೆಯವನಾಗಿದ್ದಾಗ, ಒಂದು ರಾತ್ರಿ ಕಲ್ಯಾಣಪುರದಲ್ಲಿ ಹೊಳೆಯಲ್ಲಿ ದೋಣಿಯ ಮೇಲೆ ಕುಳಿತುಕೊಂಡೆ. ಬೆಳಗ್ಗೆ ಎದ್ದುದು ನಮ್ಮೂರಿನ ಕಡವು – ಮಣೂರಿನಲ್ಲಿ. ಎಂಟು ಗಂಟೆಗಳಲ್ಲಿ ಹೋದುದು ಹತ್ತೇ ಮೈಲು. ಸಾಮಾನ್ಯ ದೋಣಿಯಲ್ಲಿ ಕುಳಿತರೆ ತಾಸಿಗೆ ಎರಡು ಮೈಲು ಹೋಗಬಹುದು. ಅವಸರವಿದ್ದ ಪ್ರಾಣಿಗೆ ಅದು ಹೇಳಿಸಿದ ಕ್ರಮವಲ್ಲ. ನಿಮಗೆ ವಿರಾಮವಿದ್ದುದಾದರೆ ನಿಮಿಷ ನಿಮಿಷಕ್ಕೂ ಸುಖ ಉಂಡು, ಹೋಗಬಹುದಾದ ಪಯಣ ದೋಣಿಯದು. ಆ ದಿನ ನಾನು - ದೋಣಿಯಲ್ಲಿ ಚಾಪೆ ಹಾಸಿ, ನಿದ್ದೆ ಬರುವಾಗ

ಒರಗುವುದಕ್ಕೆ ದಿಂಬಿಟ್ಟುಕೊಂಡು, ದೋಣಿಯ ಬಾಣಿಗೆ ಒರಗಿ, ಕುಳಿತುಕೊಂಡೆ. ಅದು ತೊಳೆ ದೋಣಿಯಲ್ಲ, ಜಲ್ಲೆಯಿಂದ ಒತ್ತುವ ದೋಣಿ, ಮಾಡು, ಮುಚ್ಚುಮರೆಗಳಿರಲಿಲ್ಲ. ಅದಕ್ಕೇನೆ ರಾತ್ರಿಯ ಪ್ರಯಾಣ ಆರಿಸಿದ್ದು. ನೀಲ ಬಾನಿಗಿಂತ ದೊಡ್ಡ ಮಾಡ್ಯಾವುದು? - ಒಂದಲ್ಲ, ಎರಡಲ್ಲ ಸಾವಿರಾರು ಚುಕ್ಕೆಗಳು ಮೇಲಿಂದ ಮಿನುಗುತ್ತಿರುತ್ತವೆ. ಸಾಲದುದಕ್ಕೆ ತಿಂಗಳು ಮಾಮ ಮೂಡಣದಲ್ಲಿ ತಲೆಯೆತ್ತಿ ಮೇಲಕ್ಕೆ ಬಂದನೇ ಬಂದ. ಅವನ ಬೆಳಕಿನ ನಗು ನದಿಯ ಅಲೆಗಳಲ್ಲಿ ಮಿನುಗತೊಡಗಿತು. ಸಾವಿರ ಜನರು ಒಮ್ಮೆಗೇ ಹಲ್ಲುಕಿರಿದು, ನಿಷ್ಕಪಟವಾಗಿ ನಕ್ಕ ಹಾಗೆ ನದಿಗೆ ನದಿಯೇ ನಗತೊಡಗಿತು. ಆಗ ದೋಣಿ ದಡಬಿಟ್ಟು ಹೊರಟಿತು. ಇಕ್ಕಡೆಯ ತೆಂಗಿನ ತೋಟಗಳು ತೂಕಡಿಸುತ್ತ ನಿದ್ದೆ ಮಾಡುತ್ತ ನಿಂತಿದ್ದವು. ದೋಣಿಯ ಜಲ್ಲೆ ನೀರನ್ನು ಹೊಕ್ಕು ಮೇಲೇಳುವಾಗ ಅದರ ಪರಿಯೇ ಬೇರೆ, ಆ ಪುಟ್ಟ ದೋಣಿ ನೀರನ್ನು ಸೀಳಿಕೊಂಡು ಮೀನಿನ ಹಾಗೆ ಓಡುವಾಗ ಅದರ ಲಾಸ್ಯವೇ ಬೇರೆ, ತಂಪಾದ ಹವೆ, ಸೊಂಪಾದ ನೋಟ, ಬಾನು ನೀರುಗಳ ಅನುಪಮ ಮೇಳವಿದು. ಬಾನನ್ನು ನೋಡುತ್ತ ಕುಳಿತರೆ ಒಂದೊಂದೇ ನಕ್ಷತ್ರ ಸಿಡಿದು ಬೀಳುವುದೂ ಕಾಣುತ್ತದೆ.

ರಾತ್ರಿಕಾಲದ ದೋಣಿ ಪ್ರಯಾಣದಲ್ಲಿ ನಿದ್ದೆ ಬರಲಿ ಬಾರದಿರಲಿ, ಮನಸ್ಸಿಗೆ ದೊರೆಯುವ ಜಲಯಾನದ ಶಾಂತಿ ಚಿರಸ್ಮರಣೀಯವಾದದ್ದು. ಇದೆಲ್ಲ ನನ್ನ ಎಳೆತನದ ಊಹೆ ಎಂದಿಟ್ಟುಕೊಂಡಿದ್ದೆ. ನಿಜಕ್ಕೂ ಹಾಗಲ್ಲ.

ಇನ್ನೊಮ್ಮೆ ನಾನು ಬೆಳೆದು ಬುದ್ಧಿ ಬಾರದಿದ್ದರೂ ಮೀಸೆ ಬಂದ ಮೇಲೆ ಹೊನ್ನಾವರದಿಂದ ಗೇರುಸೊಪ್ಪೆಯ ತನಕ ಹದಿನೆಂಟು ಮೈಲು ದೂರ - ನದಿಯಲ್ಲಿ ಹೋಗಿ ಬಂದಿದ್ದೆ. ಮಧ್ಯಾಹ್ನ ಹೊನ್ನಾವರದ ಬಂದರದಲ್ಲಿ ಮೂರು ಘಂಟೆಯ ಹೊತ್ತಿಗೆ ದೋಣಿಯಲ್ಲಿ ಕುಳಿತೆ, ಹೊನ್ನಾವರದ ಹೊಳೆ ಅಗಲ ತುಂಬ ಕಡಲಿನೊಡನೆ ನದಿ ಸಂಗಮವಾಗುವ ಸ್ಥಳ ಅದು, ಅಲೆಗಳ ಹೊಡೆತ ಹೆಚ್ಚು; ಮೇಲಿನ ಬಿಸಿಲು ಜೋರಾಗಿಯೇ ಇತ್ತು. ಆದರೆ ಒಮ್ಮೆ ದೋಣಿಯಲ್ಲಿ ಕುಳಿತ ಮೇಲೆ ದೋಣಿಯ ಮಾಡಿನ ಒಳಗೆ ಕುಳಿತುಕೊಳ್ಳುವ ಮನಸ್ಸಾಗಲಿಲ್ಲ. ಉಯ್ಯಾಲೆಯ ತೂಗಾಟ ಸುಳ್ಳು, ದೋಣಿಯ ಓಲಾಟ ನಿಜ - ತೇಲಾಡುತ್ತಲೇ ಇತ್ತು ನಮ್ಮ ದೋಣಿ. ಚಿಕ್ಕ ಪುಟ್ಟ ಅಲೆಗಳು ಬಾಣಿಗೆ ಬಡಿಯುತ್ತಲೇ ಇದ್ದವು. ದೋಣಿ ದಡ ಬಿಡುತ್ತಲೇ, ದೋಣಿಯವ ಅದರ ಹಾಯಿ ಬಿಡಿಸಿದ, ಚುಕ್ಕಾಣಿ ಹಿಡಿದು ಭೂಪತಿರಂಗನ ಹಾಗೆ ಅದರ ಹಿಂಗೋಟಿನ ಮೇಲೆ ಹೋಗಿ ಕುಳಿತನು. ದೊಡ್ಡ ದೋಣಿ ಹೊರಟೇ ಬಿಟ್ಟಿತು. ನಮ್ಮೂರ ಜಟಕಾ ಗಾಡಿಯ ವೇಗವನ್ನು ಮೀರಿಸುವ ವೇಗದಲ್ಲಿ ಹೊರಟಿತು; ಹುರುಳಿ ಹಾಕಿದ್ದಿಲ್ಲ, ಪೆಟ್ರೋಲ್ ತುಂಬಿಸಿದ್ದಿಲ್ಲ ; ದೋಣಿಯ ರಟ್ಟೆಗೂ ದಣಿವಿಲ್ಲ, ಹಾಯಿ ಬಟ್ಟೆಯ ಹೊಟ್ಟೆಗೆ ಪಡುವಣ ಗಾಳಿ ರುಮು ರುಮು ಬಡಿದಿದ್ದೇ ತಡ ನೀರನ್ನು ಸೀಳಿಕೊಂಡು ದೋಣಿ ಸಾಗಿಬಿಟ್ಟಿತು. ಆ ನೀರೋ! ಏನು ಬಣ್ಣ ಬೇಕು ಅದರಲ್ಲಿ. ಕಡು ನೀಲದಿಂದ ಹಿಡಿದು ಕಡು ಹಸುರಿನ ತನಕ ಎಲ್ಲವೂ ಇವೆ. ದಡದ ಗುಡ್ಡ, ತೆಂಗಿನ ತೋಟ, ಬಾನು ಮುಗಿಲು ಇವೆಲ್ಲವುಗಳ ಬಣ್ಣ ಬೆಡಗುಗಳನ್ನು ನೀರು

ಬಿಂಬಿಸುತ್ತಿತ್ತು. ತಾನೂ ಹೊಳೆಯುತ್ತಿತ್ತು. ದಂಡೆಗೆ ಮುಖ ಮಾಡಿದರೆ, ಎರಡೆರಡು ದಂಡೆಗಳು. ನದಿಯ ಇಬ್ಬದಿಗಳಲ್ಲಿ ಒಂದೇ ಕಡೆಯಲ್ಲಿ ಎರಡು ದಂಡೆಗಳು. ಮಗ್ಗುಲ ದಂಡೆ ಹೇಗೂ ಇದೆಯಲ್ಲ. ಅದರ ಕೆಳಗೆ ನೀರಲ್ಲಿ ತಲೆಕೆಳಗಾಗಿ ಕಾಣಿಸುವ ನೆಲ ಗುಡ್ಡ ಗಿಡ ಮರಗಳ ಸೊಬಗು ಸೃಷ್ಟಿ ಸೌಂದರ್ಯದ ಮುಖಕ್ಕೆ ಕನ್ನಡಿ ಹಿಡಿದ ಹಾಗಿತ್ತು. ಸಂಜೆಯಾದಂತೆ ದೋಣಿ ಸಾಗುತ್ತಲೇ ಇತ್ತು. ಮುಂದೆ ಮುಂದೆ ಹೋದಂತೆ ಗುಡ್ಡ ಕಾಡುಗಳ ಸೊಬಗೆಲ್ಲ ಚಿತ್ರಪಟ ಹಿಡಿದ ಹಾಗೆ ಕಣ್ಣೆದುರಿಗೆ ಬರುತ್ತಲೇ ಇದ್ದುವು, ಸಂಜೆಯಾಗುತ್ತ ಬಂದಂತೆ ಸೃಷ್ಟಿಯ ಬಣ್ಣ ಬೇರೆಯಾಯಿತು. ಎಲ್ಲೆಲ್ಲೂ ಹೊಂಬಣ್ಣ ಚೆಂಬಣ್ಣಗಳು, ಮುಳುಗುವ ಸೂರ್ಯನ ಬೆಡಗನ್ನು ನೋಡಬೇಕಾದರೆ ನದಿಯಾನದ ವೇಳೆಯಲ್ಲೇ ನೋಡಬೇಕು. ನಾವು ಗೇರುಸೊಪ್ಪೆಯ ಊರು ಸೇರಿದ್ದು ಕತ್ತಲಾಗುವಾಗ. ಅಲ್ಲಿಂದ ಮುಂದೆ ಹದಿನೆಂಟು ಮೈಲು ನಡೆದು ಜೋಗಿಗೆ ಹೋದೆವು.

ಮರುದಿನ ರಾತ್ರಿ ಅಲ್ಲಿಂದಲೇ ನಾವು ಬೆಳದಿಂಗಳ ಮರು ಪ್ರಯಾಣ ಹೂಡಿದೆವು. ಮರಳಿ ಹೊನ್ನಾವರಕ್ಕೆ, ಇಂದಿನ ದಿನ ನಾವು ಹಾದು ಹೋದ ದಾರಿಯೇ ಬೇರೆ - ಈ ದಾರಿಯೇ ಬೇರೆ ಎನ್ನುವಂತಿತ್ತು, ಆ ಒಂದೇ ದಾರಿ. ನದಿಯ ಹಗಲಿನ ಬಣ್ಣ ಬೆಡಗಿಗೂ, ರಾತ್ರಿಯ ಶಾಂತಿ ಸೊಬಗೂ ಎಷ್ಟು ಅಂತರ ಎನ್ನುತ್ತೀರಿ! ತಲಾವೊಂದರ ನಾಲ್ಕಾರಾಣೆ ಕೊಟ್ಟು, ಎಂಟು ಹತ್ತುತಾಸಿನ ಸ್ವರ್ಗ ಸೌಂದರ್ಯ ಕಾಣಲು ಬರುತ್ತದೆ ಅಂದರೆ ನೀವು ನಂಬಲಾರಿರಿ.

ಬೇರೊಮ್ಮೆ ವಂಡ್ಸೆ ಎಂಬ ಊರಿಂದ ಕುಂದಾಪುರಕ್ಕೆ ದೋಣಿಯಲ್ಲಿ ಹೋಗಿದ್ದೆ. ಪುಟ್ಟ ದೋಣಿ, ಹತ್ತೆಂಟು ಜೀವಗಳು ಒಳಗೆ. ಬೆಳಗಾದ ಮೇಲೆಯೇ ಹೊರಟದ್ದು. ಉಬ್ಬಿದ ನದಿಯ ಕಾವಿ ಬಣ್ಣದ ನೀರಿನ ಮೇಲೆಯೇ ನಮ್ಮ ಯಾನ, ತುಸು ದೂರ ಹೋಗುತ್ತಲೇ ಮುಗಿಲು ಕವಿಯಿತು. ಗುಡುಗು ಮಿಂಚು ಹೊಳೆಯಿತು. ಶಾಂತವಾಗಿದ್ದ ನದಿಯಲ್ಲಿ ಗಾಳಿಯು ಸಮುದ್ರದ ಕಲ್ಲೋಲವನ್ನು ಎಬ್ಬಿಸಿ ಬಿಟ್ಟಿತು, 'ಹೊಳೆಯಿಳಿದವಗೆ ಚಳಿಯೇನು?' ಎಂಬ ಗಾದೆಯಿದೆ ನಮ್ಮೂರಲ್ಲಿ. ಈ ಚಳಿಗೆ ನಾವು ಬಟ್ಟೆ ಹೊದ್ದರೂ ಅಷ್ಟೇ, ಬಿಟ್ಟರೂ ಅಷ್ಟೆ. ನಮ್ಮ ದೋಣಿ ಹೋಗುತ್ತಲೇ ಇತ್ತು. ನಾವು ಆ ದಿನ ಮಾಡಿದ ಸ್ನಾನವು ಒಂದು ತಿಂಗಳಿಗೆ ಸಾಕಾಗುವಷ್ಟಾಯಿತು. ಆದರೆ ಕಂಡ ನದಿಯ ರೌದ್ರ ಸೌಂದರ್ಯವು ಅಷ್ಟೇ ಸ್ಮರಣೀಯವಾಗಿತ್ತು.

ಚಿಕ್ಕ ಮರದ ಪಾತ್ರೆಗೆ ದೋಣಿ ಎಂದು ನಾಮಕರಣ. ನಾಲಿಗೆ ತಿರುಗದವರು 'ಡೋಣಿ' ಎನ್ನುವುದೂ ಉಂಟು. ಆದರೆ ಈ ಪಾತ್ರೆ ದೊಡ್ಡದಾದಂತೆ ಬೇರೆ ಹೆಸರಿದೆ. ಸಣ್ಣದು 'ಪಾತಿ' ಎನಿಸಿಕೊಳ್ಳುತ್ತದೆ.

ದೋಣಿ ದೊಡ್ಡದಾದರೆ 'ಓಡ' ಎನ್ನುತ್ತಾರೆ. ಮತ್ತೂ ದೊಡ್ಡದಾದರೆ ಮಂಜಿ, ಪತ್ತೆಮಾರಿ, ಪಡ, ನಗ, ಮಚ್ಚಿ ಎಂದೇನೇನೋ ಹೆಸರಿನಿಂದ ಕರೆಯುತ್ತಾರೆ. ಎರಡು, ಮೂರು, ನಾಲ್ಕು ಹಾಯಿಗಳನ್ನು ಕಟ್ಟುವಂತಹ ಕಡಲು ಹಾಯುವ ದೋಣಿಗಳೂ ಇವೆ.

ಒಮ್ಮೆ ಗಂಗೊಳ್ಳಿ ಬಂದರಿನಲ್ಲಿ ಕುಳಿತು ಅಳಿವೆಯಿಂದ ಇಂಥ ಒಂದು ಮಚ್ಚಿಯ ಮೇಲೆ ಎರಡು ಮೈಲು ದೂರ ಕಡಲಿನೊಳಗೆ ಹೋಗಿದ್ದೆ - ಸುಮ್ಮನೆ ತಮಾಷೆ ನೋಡುವುದಕ್ಕೆ. ಬಿಸಿಲೋ ತುಂಬ! ಹೊರಟದ್ದೂ ನಡು ಮಧ್ಯಾಹ್ನಕ್ಕೆ ಕಡಲಿನ ಸೌಂದರ್ಯವನ್ನು ಆದಷ್ಟು ಹೆಚ್ಚಿಗೆ ನೋಡಬೇಕೆಂದು. ಮಚ್ಚಿ ದಡ ಬಿಟ್ಟಿತು. ಹಾಗೆ ಕಡಲು ಸೇರುವ ಅಳಿವೆಯನ್ನು ಹೊಕ್ಕಿತು. ಆಗಲೇ ತಳಮಳ ಹೆಚ್ಚಿತು. ಆಳೆತ್ತರದ ಕಡಲಿನಲೆಗಳು ಉಕ್ಕುವಾಗ ನಮ್ಮ ದೋಣಿ ಸಹ ಅಷ್ಟೇ ಮೇಲೆ ಕೆಳಗೆ ಆಗುತ್ತದೆ. ಯಾವ ಯಾವ ಕೋನಾಕೃತಿಯಲ್ಲಿ ಬೇಕಾದರೂ ಚಲಿಸುತ್ತದೆ. ಮೊದಲಿನ ಒಂದು ಮೈಲು ಹೋಗುವುದರೊಳಗೆ ನಮ್ಮಲ್ಲಿ ಹಲವರ ಹೊಟ್ಟೆಯಲ್ಲೂ ಅಷ್ಟೇ ತಳಮಳವಾಗುತ್ತಿತ್ತು. ತಿಂದದ್ದನ್ನೆಲ್ಲ ಕಾರಿದವರೆಷ್ಟೋ ಮಂದಿ, ನಾನಂತೂ ನನ್ನ ಎತ್ತರದ ಪೀಠದ ಮೇಲೆ ಗಟ್ಟಿಯಾಗಿ ಕುಳಿತು, ಆಚೀಚಿನ ಮರ ಹಿಡಿದು ನೋಡುತ್ತಾ ಕುಳಿತಿದ್ದೆ. ಹಾಯಿ ಬಿಡಿಸಿದ್ದರು. ದೋಣಿ ಎಂಥ ಎತ್ತರದ ಅಲೆಗಳನ್ನೂ ಗಾಳಿಯ ಒತ್ತಡಕ್ಕೆ ಜಿಗಿದು ಹೋಗುತ್ತಿದ್ದ ನೋಟ ಅದ್ಭುತವಾಗಿತ್ತು. ಕಡಲಿನ ಅಲೆಗಳ ರೂಢಿಯಿಲ್ಲದವರಿಗೆ ಇದು ಕಷ್ಟವಾದೀತು. ಆದರೆ ನೋಟದ ಸುಖ ನೆನೆಸಿಕೊಂಡರೆ ಇಂಥ ಕಡಲ ಯಾನ ವಿಚಿತ್ರ ಅನುಭವ ತಂದು ಕೊಡುತ್ತದೆ. ನಮ್ಮ ದೋಣಿಯೊಟ್ಟಿಗೆ ನೀರಲ್ಲಿ ಜಿಗಿದು ಸ್ಪರ್ಧೆ ನಡೆಸುವ ಹಲವು ಜಾತಿಯ ಮೀನುಗಳನ್ನು ಕಾಣಬಹುದು, ಮೀನನ್ನು ಕಂಡೇ ಮೊದಲಿನ ಮನುಷ್ಯ ದೋಣಿ ಮಾಡಿದ್ದು ಅನ್ನುತ್ತಾರೆ.

ಜಲಯಾನಕ್ಕೂ ಸಂಗೀತಕ್ಕೂ ಅನ್ಯೋನ್ಯವಾದ ಮೇಳವಿದೆ. ನದಿಯ ಮೇಲೆ ದೋಣಿ ಲಘುವಾಗಿ ತೇಲಿದ ಹಾಗೆ, ನೀರ ಮೇಲೆ ಹೋಗುವ ನಮ್ಮ ಮನಸ್ಸು ಪ್ರಾಪಂಚಿಕ ಕಷ್ಟಗಳನ್ನು ಮರೆತು ಲಘುವಾಗಿ



ತೇಲಿಹೋಗುತ್ತದೆ. ಇಷ್ಟೆಲ್ಲ ಹೊತ್ತು ದೋಣಿಯ ಮಾತನ್ನು ಹೇಳಿದೆ. ಮರ ಇರುವ ಊರಿನಲ್ಲಿ ನದಿಗಳಿದ್ದರೆ, ದೋಣಿ ಇಲ್ಲದೆ ಹೋದರೆ - ಅಂಥವರ ಪಾಲಿಗೆ ಹರಿಗೋಲು. ಯಾಕೆ ಆ ಹೆಸರು ಬಂತೆ ನನಗೆ ಗೊತ್ತಾಗದು ಮೂಲದಲ್ಲಿ ಅದು "ಹರಿಗೋಲು" ಅಥವಾ - ಹರಿಯೇ, ಇದನ್ನು ಸಾಗಿಸುವ ಬದಲು ಕೊಲ್ಲು ಎಂದಿದ್ದಿರಬಹುದೆ? ಹತ್ತೆಂಟು ಮಂದಿ ಕುಳಿತುಕೊಳ್ಳಬಹುದಾದ ಉರುಟಾದ ಬೆತ್ತದ ಬುಟ್ಟಿಯನ್ನು ಮಾಡಿ ಅದಕ್ಕೆ ಹೊರ ಮಗ್ಗುಲಿಗೆ ಚರ್ಮ ಹೊದಿಸಿ ಇಂಥ ಹರಿಗೋಲು ಮಾಡುತ್ತಾರೆ. ಇದು ಹರಿಯುವ 'ಕೋಲು' ಅಲ್ಲ. ಪ್ರಾಯಶಃ ಗೋಳು ಇರಬಹುದು. ಒಮ್ಮೆ ಹಂಪೆಗೆ ಹೋದ ನಾನು, ತುಂಬಿದ ತುಂಗಭದ್ರಾ ನದಿಯನ್ನು ದಾಟಿ, ಆನೆಗುಂದಿಗೆ ಹೋಗುವುದಕ್ಕೆ ಇಂಥ ಹರಿಗೋಲಿನಲ್ಲಿ ಕುಳಿತೆ, ಅಪಾಯವೇನಿಲ್ಲ, ಒಳಗೆ ಹಿಡಿದಷ್ಟು ಜನ ತುಂಬಿಸುತ್ತಾರೆ, ಆ ಚರ್ಮಕ್ಕೆ ತೂತು ಬಿದ್ದರೆ ಒಳಕ್ಕೆ ನೀರು ಬಂದೀತೇ? ..... ಎಂಬ ಅನುಮಾನ ಬರಬಹುದು. ಅದು ಜೀವನ ಪಾತ್ರೆ. ನಾವೂ ಜೀವನ ಪಾತ್ರೆಗಳೇ. ನಮಗೆ ತೂತು ಬಿದ್ದರೆ ಒಳಗಿನ ನೀರು ಹೊರಗೆ ಹರಿಯುತ್ತದೆ. ಅದಕ್ಕೆ ತೂತು ಬಿದ್ದರೆ ಹೊರಗಿನ ನೀರು ಒಳಗೆ ಬರುತ್ತದೆ. ಅದರಲ್ಲಿ ಕುಳಿತು ಹೋಗುವಾಗ ದಿಕ್ಕಿನ ಮೇಲೆ ಹತೋಟಿ ಕಡಿಮೆ, ಆದರೂ ಒಂದು ಬಸ್ಸಿನಲ್ಲಿ ಕುಳಿತ ಹಾಗೆ, ಜನರು ಜಗಳ ಮಾಡಬೇಕಿಲ್ಲ. ಮಂದಿನ ಸೀಟು ಹಿಂದಣ ಸೀಟು ಎಡ-ಬಲ ಎಂಬ ತಕರಾರೇ ಅಲ್ಲಿಲ್ಲ. ಹರಿಗೋಲು ಈ ದಂಡೆಯನ್ನು ಬಿಟ್ಟು, ಆ ದಂಡೆ ಮುಟ್ಟುವುದರೊಳಗೆ ಪ್ರತಿಯೊಂದು ಕಡೆಗೂ ತಿರುಗಿ, ಪ್ರತಿಯೊಂದು ದಿಕ್ಕೂ ಎಂಟೆಂಟು ಸಾರಿ ನೋಡಲು ಸಿಗುತ್ತದೆ. ಅಂದು ನೀರಿನ ಅಮಲು ದೋಣಿಗೂ ಬಂದು ಬಿಡುತ್ತದೆ; ದಡೆ ಬಿಟ್ಟರೆ ಅದಕ್ಕೆ ತಲೆ ತಿರುಗಲು ಆರಂಭ. ದೋಣಿಕಾರ ತೊಳೆ ಹಾಕಲು ತೊಡಗಿದಂತೆ, ಉರುಟಾದ ಆ ಬುಟ್ಟಿ ಮೆಲ್ಲಗೆ ತಿರುಗಲು ತೊಡಗುತ್ತದೆ. ನೀರನ್ನು ಸೀಳಿಕೊಂಡು ಹೋಗುವ ಆಕಾರ ಇಲ್ಲದ್ದಕ್ಕೆ, ಅದು ಪ್ರವಾಹದೊಡನೆ ತೇಲಿ ಹೋಗುತ್ತದೆ. ಈ ಕಡೆಯಿಂದ ಆ ಕಡೆಗೆ: ಲಂಬವಾಗಿ ಹೋಗಬೇಕು, ನೆಟ್ಟಗೆ ಹೋಗಬೇಕು - ಅನ್ನುವವನಿಗೆ ಹರಿಗೋಲು ಹೇಳಿದ್ದಲ್ಲ. "ಹೋದರೆ ಸಾಕು, ಈಚೆಯಿಂದ ಆಚೆಗೆ" - ಎನ್ನುವ ತಾಳ್ಮೆ ಇರಬೇಕು. ನದಿಯ ಪ್ರವಾಹ ಕಂಡು, ಗುರಿಯಿಂದ ಗುರಿಗೆ ನೆಟ್ಟಗೆ ಎದುರಾಗಿ ಹೋಗುವ ಬದಲು ದಂಡೆಯಿಂದ ಎಷ್ಟೋ ಮೇಲಕ್ಕೆ ತೆಗೆದುಕೊಂಡು ಹೋಗಿ ಹರಿಗೋಲನ್ನು ತೇಲಿಸಿ ಬಿಟ್ಟರೆ, ಹೆಚ್ಚು ಕಡಿಮೆ, ಒಂದಲ್ಲ ಒಂದು ದಿನ ನಾವು ಗುರಿ ಮುಟ್ಟುತ್ತೇವೆ. ಹೋಗಿ ಆಚೆ ದಂಡೆಯನ್ನು ಸೇರುವಾಗ ಇಳಿದ ವ್ಯಕ್ತಿಯೊಡನೆ ಉತ್ತರ, ದಕ್ಷಿಣ ಪೂರ್ವ, ಪಶ್ಚಿಮ ತೋರಿಸೆಂದು ಯಾರಾದರೂ ಕೇಳಿದರೆ ಆತ ಮೇಲೆ ಕೆಳಗೆ ನೋಡುವನೇ ಹೊರತು ಸರಿಯಾದ ದಿಕ್ಕನ್ನು ಹೇಳಲಾರ. ಆ ಮಾತಂತಿರಲಿ ನೀನು ಹೊರಟ ದಂಡೆ ಯಾವುದು? ಎಂದು ಕೇಳಿದರೂ ಪ್ರಶ್ನೆ ಅಷ್ಟೇ ಕಷ್ಟದ್ದು.

ದೋಣಿ ಹರಿಗೋಲುಗಳ ಯಾನದ ಕಷ್ಟ ಆಯಾಸಗಳೆಷ್ಟೇ ಇರಲಿ - ಗಾಡಿಯಲ್ಲಿ ಕಚ್ಚಾ ರಸ್ತೆಯಲ್ಲಿ ಪ್ರಯಾಣ ಮಾಡುವುದು, ಬೇಗ ಮುಟ್ಟುತ್ತೇವೆಂದು ಮೋಟರಲ್ಲಿ ಕುಳಿತು, ಮೋಟರು ಕೆಟ್ಟು ಹಾದಿಯಲ್ಲಿ ಒಣಗುವುದು, ಇವೆರಡಕ್ಕಿಂತಲೂ ದೋಣಿ ಹರಿಗೋಲುಗಳು ಎಂದೆಂದೂ ವಾಸಿ.

## ಲೇಖಕರ ಪರಿಚಯ



'ಕಡಲ ತೀರದ ಭಾರ್ಗವ' ಡಾ. ಕೆ. ಶಿವರಾಮ ಕಾರಂತರು ಓಡಾಡುವ ವಿಶ್ವಕೋಶವಿದ್ದಂತೆ, ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ಕೃಷಿಮಾಡಿರುವ ಕಾರಂತರು ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟ ರೀತಿಯ ಕೃತಿಗಳನ್ನು ರಚಿಸಿದ್ದಾರೆ. ಮರಳಿ ಮಣ್ಣಿಗೆ, ಚೋಮನದುಡಿ, ಬೆಟ್ಟದ ಜೀವ, ಕುಡಿಯರ ಕೂಸು, ಔದಾರ್ಯದ ಉರುಳಲ್ಲಿ, ಮೂಕಜ್ಜಿಯ ಕನಸುಗಳು, ನಂಬಿದವರ ನಾಕ ನರಕ, ಸಮೀಕ್ಷೆ ಮುಂತಾದ ನಲವತ್ತನಾಲ್ಕು ಕಾದಂಬರಿಗಳನ್ನು ಬರೆದು ಪ್ರಕಟಿಸಿದ್ದಾರೆ. ಕಾರಂತರ 'ಮೂಕಜ್ಜಿಯ ಕನಸುಗಳು' ಎಂಬ ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ, 'ಮೈಮನಗಳ ಸುಳಿಯಲ್ಲಿ' ಎಂಬ ಕಾದಂಬರಿಗೆ 'ಪಂಪ' ಪ್ರಶಸ್ತಿಯೂ, 'ಯಕ್ಷಗಾನ ಬಯಲಾಟಗಳು' ಎಂಬ ಕೃತಿಗೆ ಸ್ವೀಡಿಷ್ ಅಕಾಡಮಿಯ ಬಹುಮಾನವೂ ಲಭಿಸಿವೆ. ಅಬೂವಿನಿಂದ ಬರಾಮಕ್ಕೆ, ಅಪೂರ್ವ ಪಶ್ಚಿಮ ಇವು ಇವರ ಪ್ರವಾಸ ಕಥನಗಳು; 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಇವರ ಆತ್ಮಚರಿತ್ರೆ; ಹಳ್ಳಿಯ ಹತ್ತು ಸಮಸ್ತರು ಎಂಬುದು ವ್ಯಕ್ತಿಚಿತ್ರಗಳ ಸಂಗ್ರಹ; ಮೈಲಿಕಲ್ಲಿನೊಡನೆ ಮಾತುಕತೆ ಕೃತಿ ಲಘುಪ್ರಬಂಧ ಸಂಗ್ರಹ. 'ದೋಣಿ ಹರಿಗೋಲುಗಳಲ್ಲಿ' ಎಂಬ ಪ್ರಸ್ತುತ ಪ್ರಬಂಧವನ್ನು ಅವರ 'ಬಿಡಿಬರಹಗಳು' ಎಂಬ ಕೃತಿಯಿಂದ ಆರಿಸಿದೆ.

## ಚಟುವಟಿಕೆಗಳು

### ಉತ್ತರಿಸಿರಿ

- ರಾತ್ರಿಯ ದೋಣಿ ಪಯಣದಲ್ಲಿ ಕಾಣುವ ದೃಶ್ಯಗಳು ಯಾವುವು?
- ಹಾಯಿ ದೋಣಿಯ ವಿಶೇಷತೆ ಏನು?
- ಹರಿಗೋಲನ್ನು ಹೇಗೆ ತಯಾರಿಸುವರು?
- ಹರಿಗೋಲಿನಲ್ಲಿ ಪ್ರಯಾಣಿಸಿ ಮತ್ತೊಂದು ದಡ ಸೇರಿದಾಗ ಸರಿಯಾದ ದಿಕ್ಕು ಯಾವುದೆಂದು ತಿಳಿಯಲು ಸಾಧ್ಯವಿಲ್ಲ ಎಂದು ಲೇಖಕರು ಹೇಳಲು ಕಾರಣವೇನು?

### ಸ್ವಂತ ವಾಕ್ಯ ರಚಿಸಿರಿ

ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದ ಬಳಸಿ ನಿಮ್ಮ ಸ್ವಂತ ವಾಕ್ಯ ರಚಿಸಿರಿ.

- ಸಾವಿರ ಜನರು ಒಮ್ಮೆಗೆ ಹಲ್ಲು ಕಿರಿದು ನಿಷ್ಕಪಟವಾಗಿ ನಕ್ಕ ಹಾಗೆ ನದಿಗೆ ನದಿಯೇ ನಗತೊಡಗಿತು.
- ಬಾನು ನೀರುಗಳ ಅನುಪಮ ಮೇಳವಿದು.
- ಶಾಂತವಾಗಿದ್ದ ನದಿಯಲ್ಲಿ ಗಾಳಿಯು ಸಮುದ್ರದ ಕಲ್ಲೋಲವನ್ನು ಎಬ್ಬಿಸಿಬಿಟ್ಟಿತು.
- ನದಿಯ ರೌದ್ರ ಸೌಂದರ್ಯವು ಸ್ಮರಣೀಯವಾಗಿತ್ತು.
- ಅಳಿವೆ ಬಾಗಿಲಿನ ಮೂಲಕ ಸಮುದ್ರ ಪ್ರಯಾಣದ ಸಂದರ್ಭದಲ್ಲಿ ನಮ್ಮಲ್ಲಿ ಹಲವರ ಹೊಟ್ಟೆಯಲ್ಲಿ ತಳಮಳವಾಗುತ್ತಿತ್ತು.

### ವರ್ಣನೆ ಬರೆಯಿರಿ

ಲೇಖಕರು ರಾತ್ರಿಯ ಜಲಯಾನದ ಸಂದರ್ಭದಲ್ಲಿ ವೀಕ್ಷಿಸಿದ ಪರಿಸರದ ವರ್ಣನೆಯನ್ನು ಓದಿರುವಿರಿ. ನೀವು ಒಂದು ಬೆಳದಿಂಗಳ ರಾತ್ರಿಯಲ್ಲಿ ಕಂಡ ಪರಿಸರದ ಸೌಂದರ್ಯವನ್ನು ವರ್ಣಿಸಿ ಬರೆಯಿರಿ.

### ವಿಶೇಷತೆ ಬರೆಯಿರಿ

ಈ ಕೆಳಗಿನ ವಾಕ್ಯದ ವಿಶೇಷತೆಯನ್ನು ವಿಶ್ಲೇಷಿಸಿ ಬರೆಯಿರಿ.

ನೀರಲ್ಲಿ ತಲೆಕೆಳಗಾಗಿ ಕಾಣಿಸುವ ನೆಲ ಗುಡ್ಡ ಗಿಡ ಮರಗಳ ಸೊಬಗು ಸೃಷ್ಟಿ ಸೌಂದರ್ಯದ ಮುಖಕ್ಕೆ ಕನ್ನಡಿ ಹಿಡಿದ ಹಾಗಿತ್ತು.

### ನಾಣ್ಣುಡಿ ಬರೆಯಿರಿ

"ಹೊಳೆಯಿಳಿದವಗೆ ಚಳಿಯೇನು?" ಎಂಬ ನುಡಿ ಲೇಖಕರ ಊರಿನಲ್ಲಿ ಇದೆ. ನಿಮ್ಮ ಊರಿನಲ್ಲಿ ಬಳಕೆಯಲ್ಲಿರುವ ಒಂದು ನಾಣ್ಣುಡಿಯನ್ನು ಬರೆದು ಅದರ ಅರ್ಥ ವಿಸ್ತರಿಸಿ ಬರೆಯಿರಿ.

### ಜಾಹೀರಾತು ತಯಾರಿಸಿರಿ

ಹಿನ್ನೀರಿನಲ್ಲಿ ಬೋಟ್ ಯಾನ ನಡೆಸುವ ಸಂಸ್ಥೆಯೊಂದು ಹಬ್ಬದ ಪ್ರಯುಕ್ತ ಮಕ್ಕಳಿಗೆ ದರಕಡಿತದ ಸೌಲಭ್ಯ ನೀಡುತ್ತಿದೆ. ಇದರ ಕುರಿತಾದ ಜಾಹೀರಾತೊಂದನ್ನು ತಯಾರಿಸಿರಿ.

## ಸೂಚನಾ ಫಲಕ ತಯಾರಿಸಿರಿ

ಜಲಯಾನದ ಸಂದರ್ಭದಲ್ಲಿ ಕೆಲವೊಂದು ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕಾದುದು ಅನಿವಾರ್ಯವಾಗಿದೆ. ಇದನ್ನು ಪ್ರಯಾಣಿಕರ ಗಮನಕ್ಕೆ ತರುವ ಉದ್ದೇಶದಿಂದ ಒಂದು ಸೂಚನಾ ಫಲಕವನ್ನು ತಯಾರಿಸಿರಿ.

## ಪದ ವಿಂಗಡಿಸಿರಿ

ಕೆಳಗೆ ನೀಡಿರುವ ಪದಗಳನ್ನು ವಿಂಗಡಿಸಿ ಬರೆಯಿರಿ

- ಎಳೆಯವನಾಗಿದ್ದಾಗ
- ಒಂದೊಂದು
- ಕಡಲಿನೊಳಗೆ
- ತಲೆಯೆತ್ತಿ
- ಮೇಲೇಳುವಾಗ

## ಪತ್ರಿಕಾ ಲೇಖನ ತಯಾರಿಸಿರಿ

- ಗಾಡಿಯಲ್ಲಿ ಕಚ್ಚಾ ರಸ್ತೆಯಲ್ಲಿ ಪ್ರಯಾಣ ಮಾಡುವುದು, ಮೋಟಾರು ಕೆಟ್ಟು ಹಾದಿಯಲ್ಲಿ ಒಣಗುವುದು ಇವೆರಡಕ್ಕಿಂತ ದೋಣಿ ಹರಿಗೋಲುಗಳು ಎಂದೆಂದೂ ವಾಸಿ.

ಈ ಮಾತಿನ ಹಿನ್ನೆಲೆಯಲ್ಲಿ ದೋಣಿ ಪ್ರಯಾಣದ ಪ್ರಯೋಜನಗಳನ್ನು ವಿವರಿಸುವ ಒಂದು ಪತ್ರಿಕಾ ಲೇಖನವನ್ನು ಬರೆಯಿರಿ.

## ದಿಕ್ಕುಗಳ ಹೆಸರು ಬರೆಯಿರಿ

- ತಿಂಗಳು ಮಾಮ ಮೂಡಣದಲ್ಲಿ ತಲೆಯೆತ್ತಿ ಬಂದನೇ ಬಂದ

ಈ ವಾಕ್ಯದಲ್ಲಿ 'ಮೂಡಣ' ಎಂಬುದು ಪೂರ್ವ ದಿಕ್ಕನ್ನು ಸೂಚಿಸುವುದು. ಹೀಗೆ ಉಳಿದ ದಿಕ್ಕುಗಳನ್ನು ಬರೆಯಿರಿ.

## ಸಂಧಿ ಪದಗಳು

ಕೆಳಗಿನ ಪದಗಳನ್ನು ಗಮನಿಸಿರಿ.

ಸರಿದೂಗುವ ⟶ ಸರಿ + ತೂಗುವ

ಕಿವಿಗೊಟ್ಟು ⟶ ಕಿವಿ + ಕೊಟ್ಟು

ಈ ರೀತಿ ಸಂಧಿ ಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ 'ಆದೇಶ ಸಂಧಿ'ಯಾಗಿದೆ. ಆದೇಶ ಸಂಧಿಯಲ್ಲಿ ಕ, ತ, ಪ ಗಳಿಗೆ ಗ, ದ, ಬ ಗಳು ಮತ್ತು ಕೆಲವೊಮ್ಮೆ ಪ, ಬ, ಮ ಗಳ ಬದಲಿಗೆ ವಕಾರವೂ ಆದೇಶವಾಗಿ ಬರುತ್ತದೆ.

ಕೆಳಗಿನ ಪಟ್ಟಿಯನ್ನು ಗಮನಿಸಿರಿ. ಸಂಧಿಯಾದ ಪದವನ್ನು ಬರೆಯಿರಿ.

| ವಿಂಗಡಣೆ | ಸಂಧಿ ಪದ | ಬದಲಾವಣೆ |
|---|---|---|
| ಮಳೆ + ಕಾಲ | | ಕ ← ಗ |
| ಮೈ + ತೊಳೆ | | ತ ← ದ |
| ಕಣ್ + ಪನಿ | | ಪ ← ಬ |
| ಊರು + ಕೋಲು | | ಕ ← ಗ |
| ಹುಲ್ಲು + ಕಾವಲು | | ಕ ← ಗ |

# 5. ಸುರಕ್ಷೆ - ಶ್ರೀರಕ್ಷೆ

ಸ್ಪರ್ಧಾತ್ಮಕ ಯುಗದಲ್ಲಿರುವ ಇಂದಿನ ಮನುಷ್ಯ ವಿಜ್ಞಾನ ಪ್ರಪಂಚದಲ್ಲಿ ನಾಗಾಲೋಟದಿಂದ ಮುನ್ನುಗ್ಗುತ್ತಿದ್ದಾನೆ. ತಂತ್ರಜ್ಞಾನಗಳು ಮನುಷ್ಯನ ಬದುಕಿನ ದಿಕ್ಕನ್ನು ಬದಲಾಯಿಸುತ್ತಿವೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ವೃದ್ಧರು ಅನಾಥರಾಗುತ್ತಿದ್ದಾರೆ. ಅಪ್ಪ, ಅಮ್ಮ ಪರಕೀಯರಾಗುತ್ತಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಅಭದ್ರತೆ ಮನುಷ್ಯರನ್ನು ಕಾಡುತ್ತಿದೆ. ಪ್ರಕೃತಿಯ ಮೇಲೆ ಮಾನವರು ನಡೆಸುವ ದೌರ್ಜನ್ಯದಿಂದ ಪ್ರಾಕೃತಿಕ ವಿಕೋಪಗಳು ಹಿಂದೆಂದಿಗಿಂತಲೂ ಈಗ ಹೆಚ್ಚಾಗಿವೆ. ಅತಿವೃಷ್ಟಿ, ಅನಾವೃಷ್ಟಿ, ತ್ಸುನಾಮಿ, ಭೂಕಂಪ........... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ದೇಶ ದೇಶಗಳ ಮಧ್ಯೆ ಯುದ್ಧ ನಡೆಯುವ ಸಾಧ್ಯತೆಗಳು ಹೆಚ್ಚುತ್ತಲೇ ಇವೆ. ಪ್ರತಿಯೊಂದು ವಿಚಾರದಲ್ಲಿಯೂ ತನ್ನನ್ನು ತಾನು ರಕ್ಷಿಸಿಕೊಳ್ಳುವುದು ಈ ಕಾಲಘಟ್ಟದ ಅನಿವಾರ್ಯತೆ ಮತ್ತು ಅಗತ್ಯವಾಗಿದೆ.



## ಪ್ರವೇಶ ಚಟುವಟಿಕೆ



ಮಳೆಯ ನಿರೀಕ್ಷೆಯಲ್ಲಿ ರೈತ



ಅಪ್ಪಳಿಸಿದ ತ್ಸುನಾಮಿ ಕೊಚ್ಚಿ ಹೋದ ಮನೆಗಳು



ಗಡಿಯಲ್ಲಿ ಕದನ ವಿರಾಮ ಘೋಷಣೆ



ಸರಣಿ ಭೂಕಂಪ

- ಮೇಲಿನ ಪತ್ರಿಕಾ ವಾರ್ತೆಯನ್ನು ಓದಿದಿರಲ್ಲವೇ? ನಿಮ್ಮ ಅಭಿಪ್ರಾಯವನ್ನು ತರಗತಿಯಲ್ಲಿ ಚರ್ಚಿಸಿ ಬರೆಯಿರಿ.

# ತ್ಸುನಾಮಿ ಕಥೆ

- ಸುಧಾಮೂರ್ತಿ

ಕೃಷ್ಣಪ್ಪ ಊರಿನಲ್ಲಿ ಅತ್ಯಂತ ಹಿರಿಯ ಮನುಷ್ಯ. ಕೂದಲು ನರೆತಿದೆ, ಗಡ್ಡ ಬೆಳ್ಳಗಾಗಿದೆ, ಬೆನ್ನು ಬಾಗಿದೆ, ಮುಖ ಸುಕ್ಕುಗಟ್ಟಿದೆ. ಆತ ಯೌವನದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ. ಒಂದೊಂದು ಪೈಸೆಯನ್ನು ಉಳಿಸಿ ಸಮುದ್ರ ದಡದಲ್ಲಿ ಇರುವ ಅವನ ಊರಿನ ಮಧ್ಯದ ಬೆಟ್ಟದ ಮೇಲೆ ಮನೆ ಕಟ್ಟಿದ್ದ. ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಇದ್ದರು.

ಅಂದು ಜಾತ್ರೆಯ ದಿನ ಊರಲ್ಲಿ ಎಲ್ಲರೂ ಸಂಭ್ರಮದಿಂದ ದೇವರ ತೇರು ಎಳೆಯಲು ಕೂಡಿದ್ದರು. ಮಧ್ಯರಾತ್ರಿಯಲ್ಲಿ ತೇರು ಎಳೆಯುವುದು ರೂಢಿ. ಮನೆಯಲ್ಲಿ ಎಲ್ಲರೂ ಹೊರಟಿದ್ದರು. ಕೃಷ್ಣಪ್ಪನನ್ನು ಜಾತ್ರೆಗೆ ಕರೆದರು. "ಇಲ್ಲ ನನಗೆ ಓಡಾಡಲು ಶಕ್ತಿ ಇಲ್ಲ. ನಾನು ಇಲ್ಲಿ ಮನೆಯ ಸುತ್ತಲು ಓಡಾಡಿಕೊಂಡು ಇರುತ್ತೇನೆ. ನೀವು ಹೋಗಿ ಬನ್ನಿ" ಎಂದನು. ಅದಕ್ಕೆ ಆತನ ಮರಿ ಮಗ ಗಿರಿಧರ,

"ನಾನು ಅಜ್ಜನ ಜೊತೆ ಇರುತ್ತೇನೆ. ನನಗೆ ಜಾತ್ರೆಗೆ ಹೋಗಲು ಮನಸ್ಸಿಲ್ಲ, ಅಲ್ಲಿ ತುಂಬ ಗದ್ದಲ ಇರುತ್ತೆ" ಎಂದ. ಹೀಗೆ ಕೃಷ್ಣಪ್ಪ ಮತ್ತು ಗಿರಿಧರ ಮನೆಯಲ್ಲಿ ಉಳಿದರು.



ಅವರದು ರೈತ ಕುಟುಂಬ, ಹೀಗಾಗಿ ಮನೆಯಲ್ಲಿ ದವಸ ಧಾನ್ಯ ತುಂಬಿ ಇಟ್ಟಿದ್ದರು. ಬೆಟ್ಟದ ಮೇಲಿನ ಒಂಟಿಮನೆ ಆದ್ದರಿಂದ ಸೊಸೆ ಜಾತ್ರೆಗೆ ಹೋಗುವಾಗ "ಜೋಪಾನ, ಇಬ್ಬರೇ ಇದ್ದೀರಾ" ಎಂದು ಎಚ್ಚರಿಸಿದಳು.

ಕೃಷ್ಣಪ್ಪ ಎಂದಿನಂತೆ ಬೆಟ್ಟದ ಮೇಲೆ ನಿಂತು, ಸಮುದ್ರ ದಂಡೆಯ ಮೇಲಿನ ಊರನ್ನು ನೋಡುತ್ತ, ಮೊಮ್ಮಗನಿಗೆ ತನ್ನ ಯೌವನದ ಸಾಹಸದ ಕಥೆಯನ್ನು ಹೇಳುತ್ತಿದ್ದಾಗ ಅವನ ಕಣ್ಣು ಸಮುದ್ರದ ಕಡೆಗೆ ಹೋಯಿತು. ಸಮುದ್ರ ಏಕೋ ಬೇರೆ ರೀತಿಯಿಂದ ಕಂಡಿತು.

ಆತ ಗಿರಿಧರನಿಗೆ "ಮಗು ಸಮುದ್ರ ಹಿಂದೆ ಸರಿಯುತ್ತಿದೆಯೆ? ನನಗೆ ಕಣ್ಣು ಚೆನ್ನಾಗಿ ಕಾಣುತ್ತಿಲ್ಲ, ನೀನು ನೋಡಿ ಹೇಳು" ಎಂದ.

“ಹೌದು ತಾತ, ಸಮುದ್ರ ಹಿಂದೆ ಸರಿಯುತ್ತಿದೆ. ಅದು ಆಟದ ಅಂಗಳದಂತಾಗಿದೆ. ಈ ತರಹ ನಾನು ಎಂದೂ ನೋಡಿರಲಿಲ್ಲವಲ್ಲಾ”

“ಮಗು, ಅಲ್ಲಿ ಕೆಂಬಣ್ಣದ ಮೀನುಗಳು ಕಾಣುತ್ತಿವೆಯೆ?”

“ಹೌದು ತಾತ.”

“ಮಗು ಅಲ್ಲಿ ಮರಳಿನ ಬೆಟ್ಟ ಕಾಣುತ್ತಿದೆಯಾ?”

“ಹೌದು ತಾತ.”

ಕೃಷ್ಣಪ್ಪ ಒಂದು ನಿಮಿಷ ಸುಮ್ಮನಾದ. ಆತ ಏನನ್ನೋ ಯೋಚಿಸುತ್ತಿದ್ದ.

“ಮಗು, ನಾನು ಬಾಲ್ಯದಲ್ಲಿದ್ದಾಗ ನನ್ನ ತಾತ ಸಮುದ್ರದ ಅಲೆಗಳ ಬಗ್ಗೆ ಹೇಳುತ್ತಿದ್ದರು. ಎಪ್ಪತ್ತು, ಎಂಬತ್ತು ವರ್ಷಗಳಿಗೊಮ್ಮೆ ಸಮುದ್ರದಲ್ಲಿ ಬಿರುಗಾಳಿ ಏಳುತ್ತದೆ, ಆಗ ಸಮುದ್ರದ ಅಲೆಗಳು ಹಿಂದೆ ಹೋಗಿ ಮತ್ತೆ ಮುಂದೆ ಬರುತ್ತವೆ. ಆದರೆ ಅದು ಮುಂದೆ ಬರುವಾಗ ಪ್ರಚಂಡ ರಭಸದಿಂದ ಬರುತ್ತದೆ. ಬಂದಾಗ ಸಮುದ್ರ ದಡದಲ್ಲಿರುವ ಎಲ್ಲವನ್ನು ನುಂಗಿ ಹಾಕುತ್ತದೆ. ಇದಕ್ಕೆ 'ರಾಕ್ಷಸ ಅಲೆ' ಅನ್ನುತ್ತಾರಂತೆ. ಜಪಾನಿ ಭಾಷೆಯಲ್ಲಿ 'ತ್ಸುನಾಮಿ' ಎನ್ನುತ್ತಾರಂತೆ. ಇದು ಸಮುದ್ರದ ತಳದಲ್ಲಿ ಆಗುವ ಭೂಕಂಪವಂತೆ.”

“ತಾತಾ, ಮನೆ ಜನರೆಲ್ಲಾ ಸಮುದ್ರದ ದಂಡೆಯಲ್ಲಿ ಜಾತ್ರೆಗೆ ಹೋಗಿದ್ದಾರಲ್ಲಾ, ಊರಿಗೆ ಊರೇ ಅಲ್ಲಿ ನೆರೆದಿದ್ದಾರಲ್ಲ, ಎಲ್ಲರೂ ಮುಳುಗಿ ಹೋಗಬಹುದಲ್ಲಾ? ತಾತಾ, ಓಡಿ ಹೋಗಿ ಎಲ್ಲರಿಗೂ ಹೇಳಿಬರಲೇ?” ಎಂದು ಆತಂಕದಿಂದ ಗಿರಿಧರ ಹೇಳಿದ.

ಕೃಷ್ಣಪ್ಪ ಗಲಿಬಿಲಿಗೊಂಡ.

“ಮಗು, ಈಗ ನಮಗೆ ಉಳಿದ ಸಮಯ ಬಹಳ ಸ್ವಲ್ಪ. ನಿನ್ನ ಕಾಲು ಚಿಕ್ಕವು, ನಿನ್ನ ಧ್ವನಿ ಸಣ್ಣದು, ನೀನು ಕೂಗಿದರೂ, ಓಡಿದರೂ ಯಾರಿಗೂ ತಿಳಿಸಲು ಆಗುವುದಿಲ್ಲ.” ಎಂದು ಕೃಷ್ಣಪ್ಪ ಒಂದು ಕ್ಷಣ ಯೋಚಿಸಿ "ಮಗು, ಮನೆಯ ಒಳಗೆ ಹೋಗಿ ಕಡ್ಡಿ ಪೆಟ್ಟಿಗೆ, ಸೀಮೆ ಎಣ್ಣೆ ತೆಗೆದುಕೊಂಡು ಬಾ ಎಂದ ಗಿರಿಧರನಿಗೆ.

ಗಿರಿಧರನಿಗೆ ಏನೂ ಅರ್ಥವಾಗಲಿಲ್ಲ. ತಾತನ ಗಂಭೀರ ಮುಖವನ್ನು ನೋಡಿ ಓಡಿ ಹೋಗಿ ಅವನು ತಾತ ಹೇಳಿದ ಸಾಮಾನನ್ನು ತಂದ.

ಕೃಷ್ಣಪ್ಪನು ಭತ್ತದ ಬಣವೆಗೆ ಸೀಮೆಯಣ್ಣೆಯನ್ನು ಸುರಿದು ಬೆಂಕಿ ಹೊತ್ತಿಸಿದ.

ಊರ ಕೆಳಗೆ ಜಾತ್ರೆಯಲ್ಲಿ ಯಾರೋ ಒಬ್ಬರು ಕೃಷ್ಣಪ್ಪನ ಭತ್ತದ ಬಣವೆ ಹೊತ್ತಿದ್ದನ್ನು ನೋಡಿ "ಅಯ್ಯೋ ಕೃಷ್ಣಪ್ಪನ ಭತ್ತದ ಬಣವೆಗೆ ಬೆಂಕಿ ಬಿದ್ದಿದೆ" ಎಂದರು.

ಸಣ್ಣಹಳ್ಳಿ ಕೃಷ್ಣಪ್ಪ ಎಲ್ಲರಿಗೂ ಬೇಕಾದವನು. ಹೀಗಾಗಿ ಎಲ್ಲರೂ ಬೆಟ್ಟದ ಕಡೆಗೆ ಓಡಿದರು. ಕೃಷ್ಣಪ್ಪನ ಮನೆಯವರಂತೂ "ಅಯ್ಯೋ, ತಾತನಿಗೆ ಏನಾಯಿತೋ ಏನೋ?"ಎಂದು ಜಾತ್ರೆ ಬಿಟ್ಟು ಬೆಟ್ಟದ ಮೇಲೆ ಬಂದರು. ಬೆಟ್ಟದ ಮೇಲೆ ಕೃಷ್ಣಪ್ಪ ಮತ್ತು ಗಿರಿಧರ ಆರಾಮವಾಗಿ ನಿಂತಿದ್ದರು.

ಕೃಷ್ಣಪ್ಪನ ಮಗ "ಅಪ್ಪ ಭತ್ತದ ಬಣವೆಗೆ ಯಾರು ಬೆಂಕಿ ಇಟ್ಟರು? ನಮಗಾಗದವರು ಈ ಊರಲ್ಲಿ ಯಾರಾದರು ಇದ್ದಾರಾ?"

"ಯಾರೂ ಇಟ್ಟಿಲ್ಲ. ನಾನೇ ನನ್ನ ಕೈಯಾರ ಬೆಂಕಿ ಇಟ್ಟೆ."

"ಅಪ್ಪ ನಿಮಗೆ ಹುಚ್ಚೇ? ಭತ್ತದ ಬಣವೆಯನ್ನು ಕಳೆದುಕೊಂಡೆವಲ್ಲ" ಎಂದು ಕೃಷ್ಣಪ್ಪನ ಮಗ ಆಳತೊಡಗಿದ.

"ದಯವಿಟ್ಟು ಯಾರೂ ಅಳಬೇಡಿ, ಸಮುದ್ರದ ಕಡೆಗೆ ನೋಡಿರಿ" ಎಂದ ಕೃಷ್ಣಪ್ಪ.

ಕತ್ತಲಲ್ಲಿ ಹೆಚ್ಚೇನು ಕಾಣಲಿಲ್ಲ. ಆದರೆ ಎತ್ತರದ 'ರಾಕ್ಷಸ ಅಲೆಗಳು' ಒಂದರ ಮೇಲೆ ಒಂದು ಅಪ್ಪಳಿಸಿ ದಡದ ಮೇಲಿರುವ ಎಲ್ಲಾ ಮನೆಗಳನ್ನು ಕಬಳಿಸುತ್ತಿತ್ತು. ಊರಿಗೇ ಊರೇ ನಾಶವಾಗಿತ್ತು. ಊರಿನ ಜನರೆಲ್ಲಾ ಬೆಟ್ಟದ ಮೇಲಿದ್ದರು. ಊರ ಹಿರಿಯ ಮುಂದೆ ಬಂದು ಕೃಷ್ಣಪ್ಪನ ಕಾಲು ಹಿಡಿದ.

"ಕೃಷ್ಣಪ್ಪ, ಊರನ್ನು ಉಳಿಸಲು, ಜನರ ಗಮನ ಸೆಳೆಯಲು ನೀವು ನಿಮ್ಮ ಬಣವೆಗೆ ಬೆಂಕಿ ಹಚ್ಚಿ ಎಲ್ಲವನ್ನು ಕಳೆದುಕೊಂಡಿರಿ. ಆದರೆ ಇಡೀ ಊರನ್ನೇ ಉಳಿಸಿದಿರಿ. ದೀಪ ತಾನು ಸುಟ್ಟುಕೊಂಡರೂ ತನ್ನ ಸುತ್ತ ಮುತ್ತಲಿನ ಜನರಿಗೆ ಬೆಳಕು ಬೀರುವುದಂತೆ. ಅಂತೆಯೇ ನಿಮ್ಮ ಬಾಳು".

ಕೃಷ್ಣಪ್ಪ ಏನೂ ಮಾತನಾಡಲಿಲ್ಲ, ಎಲ್ಲರನ್ನು ಉಳಿಸಿದ ಧನ್ಯತಾ ಭಾವದಿಂದ ಸುಮ್ಮನೆ ನಿಂತಿದ್ದನು.

**'ಜೀವನದಲ್ಲಿ ನಾಲ್ಕು ತರಹದ ಜನರು ಇರುತ್ತಾರೆ. ತಮ್ಮ ಸ್ವಾರ್ಥವನ್ನು ಬದಿಗೊತ್ತಿ ಪರರಿಗೆ ಹಿತವನ್ನು ಸಾಧಿಸುವವರು, ಇವರು ಶ್ರೇಷ್ಠರು. ತಮ್ಮ ಸ್ವಾರ್ಥಕ್ಕೆ ವಿರೋಧವಾಗದಂತೆ ಪರ ಹಿತಕ್ಕಾಗಿ ಶ್ರಮಿಸುವವರು ಸಾಮಾನ್ಯರು. ತಮ್ಮ ಸ್ವಾರ್ಥಕ್ಕಾಗಿ ಪರಹಿತವನ್ನು ಕೆಡಿಸುವವರು ಮಾನವ ರಾಕ್ಷಸರು. ನಿರ್ಧಾರ ಮಾಡಿಕೊಂಡು ಪರಹಿತವನ್ನು ಕೆಡಿಸುವವರನ್ನು ಹೇಗೆ ಕರೆಯಬೇಕೆಂದು ಇನ್ನೂ ಯಾರಿಗೂ ಗೊತ್ತಿಲ್ಲ.**

### ಲೇಖಕರ ಪರಿಚಯ



ಸುಧಾಮೂರ್ತಿಯವರು ೧೯೫೦ ರ ಆಗಸ್ಟ್ ೧೯ ರಂದು ಧಾರವಾಡ ಜಿಲ್ಲೆಯ 'ಶಿಗ್ಗಾಂವ್' ಗ್ರಾಮದ ಕುಲಕರ್ಣಿ ಮನೆತನದಲ್ಲಿ ಜನಿಸಿದರು. ಹುಬ್ಬಳ್ಳಿಯ ಬಿ.ವಿ.ಬಿ. ಕಾಲೇಜಿನಿಂದ ಇಲೆಕ್ಟ್ರಿಕಲ್ ಎಂಜನಿಯರಿಂಗ್‌ನಲ್ಲಿ ಬಿ.ಇ. ಪದವಿಯನ್ನು ಪಡೆದರು. ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯಲ್ಲಿ ಎಂ.ಇ. ಪದವಿಯನ್ನು ಪಡೆದರು. 'ಇನ್ಫೋಸಿಸ್ ಸಂಸ್ಥೆ'ಯನ್ನು ತಮ್ಮ ಪತಿ, ಹಾಗೂ ಅವರ ಜೊತೆಗಾರರ ಸಹಯೋಗದಿಂದ ಕಟ್ಟಿ ಬೆಳೆಸಿದ ಸಾಧಕಿ ಸುಧಾಮೂರ್ತಿಯವರು. ಮನದ ಮಾತು, ಯಶಸ್ವಿ, ಪರಿಧಿ, ಮಹಾಶ್ವೇತೆ, ಗುಟ್ಟೊಂದ ಹೇಳುವೆ ಮುಂತಾದ ಕನ್ನಡ ಕೃತಿಗಳನ್ನು ಹಾಗೂ ಆಂಗ್ಲ ಭಾಷೆಯಲ್ಲಿ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಪದ್ಮಶ್ರೀ', 'ರಾಜ್ಯೋತ್ಸವ ಪ್ರಶಸ್ತಿ'ಗಳಂಥ ಅನೇಕ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದ ಸುಧಾಮೂರ್ತಿಯವರು ಇನ್ಫೋಸಿಸ್ ಫೌಂಡೇಶನ್ ಮೂಲಕ ನೊಂದವರ, ಹಸಿದವರ, ಬಡವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ೨೦೨೪ ರಲ್ಲಿ ರಾಜ್ಯಸಭೆಯ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಈ ಪಾಠಭಾಗವನ್ನು ಮಕ್ಕಳಿಗಾಗಿ 'ನನ್ನ ಮೆಚ್ಚಿನ ಕತೆಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

- ಕೃಷ್ಣಪ್ಪನು ಬೆಟ್ಟದ ಮೇಲೆ ನಿಂತು ಸಮುದ್ರ ದಂಡೆ ಮೇಲಿನ ಊರನ್ನು ನೋಡುತ್ತಾ ಮೊಮ್ಮಗನಿಗೆ ಏನೆಂದು ಹೇಳಿದನು?
- ಕೃಷ್ಣಪ್ಪ ಮೊಮ್ಮಗನಲ್ಲಿ ಮನೆಯೊಳಗಿನಿಂದ ಬೆಂಕಿ ಪೆಟ್ಟಿಗೆ ಮತ್ತು ಸೀಮೆಎಣ್ಣೆ ತೆಗೆದುಕೊಂಡು ಬಾ ಎಂದು ಹೇಳಿದುದು ಯಾಕೆ?
- ಜಾತ್ರೆಗೆ ಹೋದ ಜನರೆಲ್ಲರೂ ಬೆಟ್ಟದ ಕಡೆಗೆ ಓಡಿ ಬರಲು ಕಾರಣವೇನು?
- ಊರ ಹಿರಿಯ ವ್ಯಕ್ತಿಯು ಕೃಷ್ಣಪ್ಪನ ಕಾಲು ಹಿಡಿದು ಹೇಳಿದ ಮಾತುಗಳು ಯಾವುವು?
- ತ್ಸುನಾಮಿ ಕಥೆ ನೀಡುವ ಸಂದೇಶವೇನು?

### ಊಹಿಸಿ ಬರೆಯಿರಿ

ಕೃಷ್ಣಪ್ಪನು ಭತ್ತದ ಬಣವೆಗೆ ಬೆಂಕಿ ಕೊಡದೆ ಇರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಕಥೆ ಬರೆಯಿರಿ.

### ಅಭಿನಂದನ ಪತ್ರ ತಯಾರಿಸಿರಿ

ತನ್ನ ಭತ್ತದ ಬಣವೆಯನ್ನು ತಾನೇ ಉರಿಸಿ ಊರಿನ ಜನರನ್ನು ಸಂರಕ್ಷಿಸಿದ ಕೃಷ್ಣಪ್ಪನನ್ನು ಅಭಿನಂದಿಸಲು ಅಭಿನಂದನ ಪತ್ರವನ್ನು ತಯಾರಿಸಿರಿ.

### ಪತ್ರಿಕಾ ವಾರ್ತೆ ಬರೆಯಿರಿ

ಪ್ರಕೃತಿ ವಿಕೋಪಗಳಿಂದ ನೊಂದ ಜನರ ಬವಣೆಗಳ ಚಿತ್ರಣವನ್ನು ತಿಳಿಸುತ್ತಾ ದಾನಿಗಳು, ಸಂಘ ಸಂಸ್ಥೆಗಳು, ಸರಕಾರಗಳು ಸಂತ್ರಸ್ತರಿಗೆ ನೆರವನ್ನು ನೀಡಿ ಅವರ ಬದುಕಿಗೆ ಭದ್ರತೆಯನ್ನು ಒದಗಿಸುವಂತೆ ಕರೆ ನೀಡುವ ಒಂದು ಪತ್ರಿಕಾ ವಾರ್ತೆಯನ್ನು ಬರೆಯಿರಿ.

### ಲೇಖನ ಬರೆಯಿರಿ

ತ್ಸುನಾಮಿ ಕಥಾಭಾಗವನ್ನು ಓದಿದಿರಲ್ಲವೇ? ಇಂಥ ಪ್ರಕೃತಿ ದುರಂತಗಳಿಗೆ ಮನುಷ್ಯನ ಸ್ವಾರ್ಥವೇ ಕಾರಣವಿರಬಹುದು. 'ಪ್ರಕೃತಿ ಸಂರಕ್ಷಣೆ' ನಮ್ಮೆಲ್ಲರ ಹೊಣೆ ಈ ವಿಷಯದ ಕುರಿತು ಭಾಷಣ ಮಾಡಲು ಲೇಖನ ಒಂದನ್ನು ತಯಾರಿಸಿರಿ.

### ಪಟ್ಟಿ ತಯಾರಿಸಿರಿ

ಪ್ರಾಕೃತಿಕ ದುರಂತಗಳ ಸಂದರ್ಭಗಳಲ್ಲಿ ನಮ್ಮ ರಕ್ಷಣೆಗೆ ಅತ್ಯಗತ್ಯವಾಗಿ ಸಂಗ್ರಹಿಸಿಡಬೇಕಾದ ವಸ್ತುಗಳ ಪಟ್ಟಿ ತಯಾರಿಸಿರಿ.

### ವಿರುದ್ಧಾರ್ಥ ಪದ ಬಳಸಿ ವಾಕ್ಯ ರಚಿಸಿರಿ

ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ವಿರುದ್ಧಾರ್ಥ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.

- ತಾತ ಓಡಿ ಹೋಗಿ ಎಲ್ಲರಿಗೂ ಹೇಳಿ ಬರಲೇ? ಎಂದು ಆತಂಕದಿಂದ ಗಿರಿಧರ ಹೇಳಿದ.
- ಮಗು ಸಮುದ್ರ ಹಿಂದೆ ಸರಿಯುತ್ತಿದೆಯೇ?
- ಕೃಷ್ಣಪ್ಪ ಊರಿನಲ್ಲಿ ಅತ್ಯಂತ ಹಿರಿಯ ಮನುಷ್ಯ.

## ಆಗಮ ಸಂಧಿ

ಕೆಳಗಿನ ಉದಾಹರಣೆಗಳನ್ನು ಓದಿರಿ.

ಮನೆ + ಅಲ್ಲಿ = ಮನೆಯಲ್ಲಿ

ಕಥೆ + ಅನ್ನು = ಕಥೆಯನ್ನು

ಆರಾಮ + ಆಗಿ = ಆರಾಮವಾಗಿ

ಹೂ + ಎಲ್ಲಿ = ಹೂವೆಲ್ಲಿ

| |
|---|
| ಎ + ಅ - ಯ |
| ಅ + ಆ - ವ |
| ಉ + ಎ - ವ |

ಅ, ಉ, ಊ, ಋ, ಓ ಸ್ವರಾಕ್ಷರಗಳ ಎದುರಿಗೆ ಯಾವುದೇ ಸ್ವರ ಬಂದರೆ "ವ" ಅಕ್ಷರವು ಆಗಮವಾಗುತ್ತದೆ.

ಆ, ಇ, ಈ, ಎ, ಏ, ಐ,ಓ ಸ್ವರಾಕ್ಷರಗಳ ಮುಂದೆ ಸ್ವರ ಬಂದರೆ "ಯ" ಅಕ್ಷರವು ಆಗಮವಾಗುತ್ತದೆ.

ಪೂರ್ವ ಪದದ ಕೊನೆಯಲ್ಲಿರುವ ಸ್ವರದ ಮುಂದೆ ಮತ್ತೊಂದು ಸ್ವರವು ಬಂದಾಗ ಆ ಎರಡು ಸ್ವರಗಳ ನಡುವೆ ಬೇರೊಂದು ವರ್ಣವು ಬಂದು ಸಂಧಿಯಾಗುತ್ತದೆ. ಈ ಸಂಧಿಯನ್ನು ಆಗಮ ಸಂಧಿ ಎಂದು ಹೇಳುತ್ತಾರೆ.

ಆಗಮ ಸಂಧಿಯಲ್ಲಿ 'ಯ'ಕಾರಾಗಮ ಮತ್ತು 'ವ'ಕಾರಾಗಮ ಎನ್ನುವ ಎರಡು ವಿಧಗಳಿವೆ.

## ಪರ್ಯಾಯ ಪದ

ಕೆಳಗಿನ ಪದದ ಪರ್ಯಾಯ ಪದಗಳನ್ನು ಹುಡುಕಿ ಪದ ಸೂರ್ಯವನ್ನು ಭರ್ತಿಗೊಳಿಸಿರಿ.






## ವಿಭಕ್ತಿ

ಮನೆ + ಉ = ಮನೆಯು

ಮನೆ + ಅನ್ನು = ಮನೆಯನ್ನು

ಮನೆ + ಇಂದ = ಮನೆಯಿಂದ

ಮನೆ + ಗೆ (ಕೆ, ಗೆ, ಇಗೆ) = ಮನೆಗೆ

ಮನೆ + ಅ = ಮನೆಯ

ಮನೆ + ಅಲ್ಲಿ = ಮನೆಯಲ್ಲಿ

ನಾಮ ಪ್ರಕೃತಿಗೂ, ಇತರ ಪದಗಳಿಗೂ ಸಂಬಂಧವನ್ನು ಏರ್ಪಡಿಸಿ, ಅರ್ಥಪೂರ್ಣವಾದ ವಾಕ್ಯ ರಚನೆಗೆ ಸಹಾಯಕವಾಗುವ ಅಂಶವನ್ನು "ವಿಭಕ್ತಿ" ಎನ್ನುವರು.

ಕೆಳಗೆ ಕೊಟ್ಟಿರುವ ತಖ್ತೆಯಲ್ಲಿರುವ ಪದಗಳಿಗೆ ಸರಿಯಾದ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಸಾಧ್ಯವಿರುವಷ್ಟು ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ.

| | | |
|---|---|---|
| ಶಿವಪ್ಪ | ಹೊಲ | ಕಟ್ಟಿದನು |
| ಮುದ್ದಣ್ಣ | ಕಬ್ಬು | ಹೋದಳು |
| ಶೀಲಾ | ತೋಟ | ಬೆಳೆಸಿದನು |
| ಸಫಿಯಾ | ಮನೆ | ಬಂದಳು |
| ಜೋನ್ | | ಬಂದನು |
| | | ಕಡಿದನು |
| | | ಹೋದನು |
| | | ಕಡಿದಳು |

# ಸಾಲ

- ವೈ. ಸತ್ಯನಾರಾಯಣ ಕಾಸರಗೋಡು

ಶಿವಪ್ಪ ಗುಡಿಸಲಿನಲ್ಲಿ ಚಿಂತಾಕ್ರಾಂತನಾಗಿ ಕುಳಿತಿದ್ದ. ಸಾಹುಕಾರನ ಸಾಲ ತೀರಿಸಲಾಗದೆ ಅವರ ಗೂಂಡಾಗಳಾದ ದಾಂಢಿಗರ ಹಿಂಸೆ ತಾಳಲಾರದೆ ಊರುಬಿಟ್ಟು ಹೋದ ಅಪ್ಪನ ಪತ್ತೆಯೇ ಇರಲಿಲ್ಲ. ಅಮ್ಮ ಈ ಆಘಾತದಿಂದ ಹಾಸಿಗೆ ಹಿಡಿದಳು. ಮಗುವನ್ನು ಅಪಹರಿಸುತ್ತೇವೆ ಎಂದು ಬೆದರಿಸಿದ್ದರಿಂದ ಹೆಂಡತಿ ಮಗುವಿನೊಡನೆ ತವರಿಗೆ ಹೊರಟು ಹೋದಳು. ಗದ್ದೆ ಪಾಳು ಬಿದ್ದಿದೆ. ಕೃಷಿ ಮಾಡೋಣವೆಂದರೆ ಕೈಯಲ್ಲಿ ಪುಡಿಗಾಸೂ ಇಲ್ಲ. ಬ್ಯಾಂಕುಗಳು ಸಾಲ ಕೊಡುವುದಿಲ್ಲ. ಮೊದಲು ಮಾಡಿದ್ದ ಸಾಲ ತೀರಿಸಲು ಬ್ಯಾಂಕಿನ ಅಧಿಕಾರಿಗಳಿಂದ ನೆನಪಿನೋಲೆ ಬರುತ್ತಾ ಇದೆ. ಯಾವಾಗ ಜಪ್ತಿ ನೋಟೀಸು ಬರುತ್ತದೆಂದು ಗೊತ್ತಿಲ್ಲ. ಗುಡಿಸಲಿನಲ್ಲಿ ತಿನ್ನಲು ಏನೂ ಇಲ್ಲ. ಅಮ್ಮನಿಗೆ ಮದ್ದು ತರಲು ಹಣವಿಲ್ಲ. ಅನ್ನದಾತ, ದೇಶದ ಬೆನ್ನೆಲುಬು ಎಂದೆಲ್ಲ ರೈತರನ್ನು ಹೊಗಳಿ ಅಟ್ಟಕ್ಕೇರಿಸುತ್ತಾರೆ, ಮಾರಿದ ಬೆಳೆಯ ಹಣವನ್ನಾದರೂ ಕೊಟ್ಟಿದ್ದರೆ ಅಪ್ಪ ಊರುಬಿಡುವ ಪ್ರಯತ್ನ ಮಾಡಿಕೊಳ್ಳುತ್ತಿರಲಿಲ್ಲ.

ಶಿವಪ್ಪನ ಕಣ್ಣುಗಳು ತೇವಭರಿತವಾಗಿದ್ದುವು. ಆಗ ಇಬ್ಬರು ದಾಂಢಿಗರು ಪ್ರತ್ಯಕ್ಷರಾದರು. "ಏ ಶಿವಪ್ಪ, ಏನು ಆರಾಮವಾಗಿ ಕುಳಿತು ಯೋಚಿಸುತ್ತಿ? ಸಾಹುಕಾರರಿಗೆ ನಿನ್ನನ್ನು ಕೂಡಲೇ ನೋಡಬೇಕಂತೆ. ಕರೆದುಕೊಂಡು ಬರಲು ನಮ್ಮನ್ನು ಕಳಿಸಿದ್ದಾರೆ. ನಡಿ ಹೋಗೋಣ" ಒಬ್ಬ ದರ್ಪದಿಂದ ಹೇಳಿದ.



ಇನ್ನೊಬ್ಬ ಶಿವಪ್ಪನನ್ನು ಹಿಡಿದು ಎಬ್ಬಿಸಿದ. ಶಿವಪ್ಪ ಅಮ್ಮನ ಕಡೆಗೆ ಒಮ್ಮೆ ನೋಡಿ ಕಂಬನಿ ಒರೆಸುತ್ತಾ ಅವರೊಂದಿಗೆ ಹೆಜ್ಜೆ ಹಾಕಿದ.

ಮುದ್ದಣ್ಣ ಶಿವಪ್ಪನನ್ನು ದುರುಗುಟ್ಟಿ ನೋಡುತ್ತಾ ಕೇಳಿದ, “ನಾನು ನಿನ್ನನ್ನು ಕಾಣಬೇಕಿದ್ದರೆ ನಾನೇ ನಿನ್ನ ಗುಡಿಸಲಿಗೆ ಬರಬೇಕೊ? ಕಬ್ಬು ಬೆಳೆಯುವ ರೈತರಿಗೆ ಇಷ್ಟು ಕೊಬ್ಬು ಇರಬಾರದು.”
ನಿನ್ನ ಅಪ್ಪ ಮಾಡಿದ ಸಾಲವನ್ನು ಯಾವಾಗ ತೀರಿಸುತ್ತಿ? ನಿನ್ನಪ್ಪ ತಿಮ್ಮಪ್ಪ ಮಾಡಿದ ಸಾಲ ಎರಡು ಲಕ್ಷ

ಬಡ್ಡಿ ಸೇರಿ ಈಗ ಮೂರು ಲಕ್ಷ ರೂಪಾಯಿ ಆಗಿದೆ. ನನಗೀಗ ತುರ್ತಾಗಿ ಹಣದ ಅಗತ್ಯವಿದೆ. ಯಾವಾಗ ಸಾಲ ತೀರಿಸುತ್ತಿ? ಹೇಳು."

"ಸಾಹುಕಾರ್ರೆ, ನನ್ನ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ, ಅಪ್ಪ ನಮ್ಮನ್ನು ಬಿಟ್ಟುಹೋಗಿ ಉಂಟಾದ ಆಘಾತದಿಂದ ನಾವಿನ್ನೂ ಚೇತರಿಸಿಲ್ಲ. ಅಮ್ಮ ಅರೆ ಹುಚ್ಚಿಯಂತೆ ಆಗಿದ್ದಾಳೆ. ಹಾಸಿಗೆ ಹಿಡಿದಿದ್ದಾಳೆ. ಅವಳಿಗೆ ಚಿಕಿತ್ಸೆ ಆಗಬೇಕು. ಜೇಬಿನಲ್ಲಿ ಚಿಕ್ಕಾಸಿಲ್ಲ. ಹೀಗಿರುವಾಗ ಇಷ್ಟು ದೊಡ್ಡ ಮೊತ್ತದ ಸಾಲವನ್ನು ಕೂಡಲೇ ತೀರಿಸಬೇಕೆಂದು ಹೇಳಿದರೆ ನಾನೇನು ಮಾಡಲಿ?"

"ನೀನು ಈಗ ಒಂದು ಕಾಸೂ ಕೊಡುವುದು ಬೇಡ. ಆದರೆ ಕೆಲವು ಶರ್ತಗಳಿವೆ. ಮೊದಲನೆಯದಾಗಿ ನೀನು ಕೆಲವು ಕಾಗದಗಳಿಗೆ ಸಹಿ ಮಾಡಬೇಕು. ಗದ್ದೆಯಲ್ಲಿ ಕಬ್ಬನ್ನೇ ಬೆಳೆಸಬೇಕು. ಬೇರೆ ಧಾನ್ಯ ಬೆಳೆಯಬಾರದು. ಬೆಳೆದ ಕಬ್ಬನ್ನು ನಾನು ಹೇಳಿದ ಕಾರ್ಖಾನೆಗೆ ಮಾರಬೇಕು. ಬೇರೆ ಯಾರಿಂದಲೂ ಸಾಲ ತೆಗೆಯಬಾರದು."

"ಸರಿ ಸಾಹುಕಾರರೇ, ನೀವು ಹೇಳಿದಂತೆ ನಡೆಯುತ್ತೇನೆ" ಎಂದು ಸಾಹುಕಾರನಿಗೆ ವಂದಿಸಿ ಹೊರಟ ಶಿವಪ್ಪ.

ಶಿವಪ್ಪನ ಗದ್ದೆ ಉಳುವುದಕ್ಕೆ ಸಾಹುಕಾರನ ಟ್ರಾಕ್ಟರ್ ಬಂದು ನಿಂತಿತು. ಸಂಜೆಯೊಳಗೆ ಗದ್ದೆಯನ್ನು ಹಸನುಗೊಳಿಸಿ ಹೋಗಿಬಿಟ್ಟರು. ಶಿವಪ್ಪ ಕೃಷಿಯ ಕೆಲಸ ಆರಂಭಿಸಿದ. ಬೆಳೆ ಮೊಳಕೆಯಿಂದಲೇ ಬಡಕಲಾಗಿತ್ತು. ಎಷ್ಟು ಗೊಬ್ಬರ ಹಾಕಿದರೂ ಗಿಡಗಳು ಹುಲುಸಾಗಿ ಬೆಳೆಯಲಿಲ್ಲ. ಶಿವಪ್ಪನ ಮನಸ್ಸಿನಲ್ಲಿ ಸಂಶಯಗಳು ಹುಟ್ಟಿಕೊಂಡವು.

ಶಿವಪ್ಪ ಒಂದು ದಿನ ಕೃಷಿ ಅಧಿಕಾರಿಯೊಬ್ಬರನ್ನು ಕರೆದುಕೊಂಡು ಬಂದು ತನ್ನ ಬೆಳೆಯನ್ನು ತೋರಿಸಿ ಪರಿಹಾರ ಕೇಳಿದ. ಅಧಿಕಾರಿ ಕೂಲಂಕಷವಾಗಿ ಎಲ್ಲ ವಿವರಗಳನ್ನು ಸಂಗ್ರಹಿಸಿ ಹೇಳಿದ. "ನೀವು ಉಪಯೋಗಿಸಿದ ಗೊಬ್ಬರ ಮತ್ತು ಕ್ರಿಮಿನಾಶಕ ಕೂಡಾ ಕಲಬೆರಕೆಯದ್ದಾಗಿದೆ. ನಿಮ್ಮನ್ನು ಯಾರೋ ಉದ್ದೇಶಪೂರ್ವಕವಾಗಿ ವಂಚಿಸಿದ್ದಾರೆ. ಮುಂದಿನ ಸಲ ಎಚ್ಚರ ವಹಿಸಿ." ಶಿವಪ್ಪನಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. "ಸಾಹುಕಾರರು ಸಿಹಿಮಾತುಗಳಿಂದ ತನ್ನನ್ನು ಮರುಳುಗೊಳಿಸಿ ವಂಚಿಸಿದ್ದಾರೆ. ಎದುರಿನಲ್ಲಿ ಸಹಾಯ ಮಾಡುವಂತೆ ನಾಟಕ ಮಾಡಿ ಬೆನ್ನಿಗೆ ಇರಿದಿದ್ದಾರೆ. ಇವರ ಕಿರುಕುಳದಿಂದ ಪಾರಾಗುವುದು ಹೇಗೆ?" ಯೋಚಿಸಲಾರಂಭಿಸಿದ.

"ಶಿವಪ್ಪ, ಕಟಾವು ಆದ ಕೂಡಲೆ ಕಬ್ಬನ್ನು ನಿನ್ನ ಸಾಹುಕಾರರು ಹೇಳಿದವರಿಗೆ ಮಾರುವುದು ಬೇಡ. ಧೂಮಪ್ಪನ ಕಾರ್ಖಾನೆಗೆ ಕೊಂಡುಹೋಗು. ಅವರು ಒಳ್ಳೆಯ ಬೆಲೆ ಕೊಡುತ್ತಾರೆ. ಮಾತ್ರವಲ್ಲ ಆಗಲೇ ಕೊಡುತ್ತಾರೆ." ಗೆಳೆಯ ನಂಜುಂಡಪ್ಪ ಹೇಳಿದಾಗ ಶಿವಪ್ಪನಿಗೆ ಅದು ಸರಿಯೆಂದು ತೋರಿತು. ಶಿವಪ್ಪ ಕಬ್ಬನ್ನು ಟೆಂಪೋಗಳಲ್ಲಿ ಧೂಮಪ್ಪನ ಕಾರ್ಖಾನೆಗೆ ಸಾಗಿಸುತ್ತಿದ್ದ. ಅರ್ಧ ದಾರಿಯಲ್ಲಿ ಟ್ರಾಕ್ಟರೊಂದು ರಸ್ತೆಗೆ ಅಡ್ಡವಾಗಿ

ನಿಂತಿತ್ತು. ಪಕ್ಕದಲ್ಲೇ ನಿಲ್ಲಿಸಿದ್ದ ಕಾರಿನಲ್ಲಿ ಮುದ್ದಣ್ಣ ಕುಳಿತು ಕೆಂಡ ಕಾರುವ ಕಣ್ಣುಗಳಿಂದ ಶಿವಪ್ಪನನ್ನು ದಹಿಸುವಂತೆ ನೋಡುತ್ತಿದ್ದ. ಶಿವಪ್ಪ ಭಯದಿಂದ ನಡುಗುತ್ತಾ, "ಕ್ಷಮಿಸಿ ಸಾಹುಕಾರರೇ, ಇನ್ನೊಬ್ಬರ ಮಾತು ಕೇಳಿ ನಿಮಗೆ ಅನ್ಯಾಯ ಮಾಡಲು ಹೊರಟೆ. ತಪ್ಪಾಯಿತು."

ಮುದ್ದಣ್ಣ ಗರ್ಜಿಸಿದ, "ವಂಚಕ, ದ್ರೋಹಿ! ನಾನು ಹಾವಿಗೆ ಹಾಲೆರೆದೆನೆಂದು ಈಗ ಸ್ಪಷ್ಟವಾಯಿತು. ಇನ್ನು ಯಾವುದೇ ಅನುಕಂಪವನ್ನು ನನ್ನಿಂದ ನಿರೀಕ್ಷಿಸುವುದು ಬೇಡ. ಒಂದಾ ಸಾಲ ತೀರಿಸು, ಅಥವಾ ಊರು ಬಿಟ್ಟು ಹೋಗು. ನನ್ನ ಸೇವಕರಿಗೆ ಕೆಲಸ ಕೊಡಬೇಡ!"

ಸಾಹುಕಾರರ ಮಾತನ್ನು ಕೇಳಿ ಶಿವಪ್ಪ ತತ್ತರಿಸಿ ಹೋಗಿದ್ದ. ಏನು ಮಾಡಲಿ? ತಂದೆಯ ದಾರಿ ಹಿಡಿಯುವುದೆ? ಆದರೆ ಅದರಿಂದ ಸಾಹುಕಾರ ಪಾಠ ಕಲಿಯುವುದಿಲ್ಲ. ಬದಲಾಗಿ ಕೊಬ್ಬು ಹೆಚ್ಚಾಗುತ್ತದೆ.
ಕುಳಿತಲ್ಲೇ ಯೋಚಿಸಿ ಒಂದು ನಿರ್ಧಾರಕ್ಕೆ ಬಂದ. "ಸಾಹುಕಾರ ಮಾಡಿದ ಮೋಸವನ್ನೆಲ್ಲ ವಿವರವಾಗಿ ಬರೆದಿಟ್ಟು ಅವನ ಮನೆ ಎದುರು ಇರುವ ಮರಕ್ಕೆ ನೇಣು ಹಾಕಿ ಆತ್ಮಹತ್ಯೆ ಮಾಡುತ್ತೇನೆ. ಪತ್ರದ ಪ್ರತಿಗಳನ್ನು ಹೆಂಡತಿಗೆ, ಪೊಲೀಸರಿಗೆ, ಮುಖ್ಯಮಂತ್ರಿಗೆ, ಜಿಲ್ಲಾಧಿಕಾರಿಗಳಿಗೆ ಮತ್ತು ನ್ಯಾಯಾಧೀಶರಿಗೆ ಕಳಿಸುತ್ತೇನೆ.

ಪತ್ರವನ್ನು ಬರೆದಿಟ್ಟು, ಸಾಹುಕಾರನ ಮನೆಗೆ ಹೊರಟ. ಮನೆಯ ಎದುರಿದ್ದ ಮಾವಿನ ಗೆಲ್ಲಿಗೆ ತಾನು ತಂದಿದ್ದ ಹಗ್ಗವನ್ನು ಕಟ್ಟಿದ. ಕುಣಿಕೆ ಹಾಕಿದ. ಅಲ್ಲೇ ಒಂದು ಕಡೆ ಹಗ್ಗದಲ್ಲಿ ಬಟ್ಟೆಗಳನ್ನು ಒಣಗಲು ಹಾಕಿದ್ದರು. ಶಿವಪ್ಪನಿಗೆ ಒಂದು ಹೊಸ ಯೋಚನೆ ಹೊಳೆಯಿತು. "ಹಗ್ಗದಿಂದ ನೇಣು ಹಾಕುವ ಬದಲು ಸಾಹುಕಾರನ ಬಟ್ಟೆಯಿಂದಲೇ ನೇಣು ಹಾಕಿದರೆ ಹೇಗೆ?" ಯೋಚನೆ ಬಂದದ್ದೇ ತಡ ಮತ್ತೊಂದು ಬಟ್ಟೆ ತೆಗೆಯಲು ಕುಂಟುತ್ತಾ ಆ ಕಡೆಗೆ ನಡೆದ, ಆದರೆ ಒಂದು ಕಡೆ ಮೆಟ್ಟಿಲಿದ್ದದ್ದು ಅವನಿಗೆ ಕಾಣಲಿಲ್ಲ. ಅಲ್ಲಿ ಎಡವಿ ಬಿದ್ದು ಬಿಟ್ಟ. ಪೆಟ್ಟಾಗಿ ಜೋರಾಗಿ ಕೂಗಿಕೊಂಡ. ಅಷ್ಟರಲ್ಲಿ ಮನೆಯ ಕಾವಲುಗಾರ ಬಿಗಿಲೂದುತ್ತಾ ಧಾವಿಸಿ ಬಂದ, ಕೂಡಲೇ ಮತ್ತಿಬ್ಬರು ಸೇವಕರು ಓಡಿ ಬಂದು ಶಿವಪ್ಪನನ್ನು ಹಿಡಿದುಕೊಂಡರು. ಅವನ ಕಿಸೆಯಿಂದ ಚೂರಿಯನ್ನು ವಶಪಡಿಸಿದರು. ಮುದ್ದಣ್ಣನ ಮಗ ಎಂಜಿನಿಯರ್ ಶಶಿಕಾಂತ ಎಚ್ಚೆತ್ತು ಅಲ್ಲಿಗೆ ಬಂದ.

"ನೋಡಿ ಸಾಹೇಬ್ರೆ. ಇವನು ಸಾಹುಕಾರರನ್ನು ಕೊಲೆ ಮಾಡಲು ಬಂದಿದ್ದಾನೆ. ಹರಿತವಾದ ಚೂರಿಯೊಂದಿಗೆ ಹಿಂದಿನ ಭಾಗದ ಗೋಡೆ ಹಾರಿ ಬಂದಿದ್ದಾನೆ". ಕಾವಲುಗಾರ ಹೇಳಿದ, ಶಿವಪ್ಪನನ್ನು ನೋಡಿದ ಶಶಿಕಾಂತನಿಗೆ ಆವನು ಕೊಲೆ ಮಾಡುವಷ್ಟು ಕ್ರೂರನಲ್ಲ ಎನಿಸಿತು. ಆದರೂ ಹೇಳಿದ "ಸರಿ ನೀವು ಗೇಟಿನ ಬಳಿ ಇರಿ, ನಾನು ಇವನೊಡನೆ ಮಾತನಾಡುತ್ತೇನೆ"

ಶಶಿಕಾಂತ ಶಿವಪ್ಪನನ್ನು ಕರೆದುಕೊಂಡು ಅತಿಥಿಗಳು ಕುಳಿತುಕೊಳ್ಳುವ ಕೋಣೆಗೆ ಹೋಗಿ ಕುರ್ಚಿ ತೋರಿಸಿ 'ಅಲ್ಲಿ ಕುಳಿತುಕೊ' ಎಂದ.



“ಬೇಡ ನಾನು ನಿಂತೇ ಇರುತ್ತೇನೆ.”

“ಆಗಲಿ, ಹಾಗೇ ಮಾಡು. ನಿನಗೆ ನನ್ನ ಪರಿಚಯವಿದೆಯೋ?”

“ಇದೆ ಸಾಹುಕಾರರೇ, ನೀವು ಚಿಕ್ಕವರಾಗಿದ್ದಾಗ ಒಂದು ಭೀಕರ ಮಳೆಯ ದಿನ ಕಾಲು ಜಾರಿ ತೋಡಿಗೆ ಬಿದ್ದು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದಾಗ ನಿಮ್ಮ ಬೊಬ್ಬೆ ಕೇಳಿ ಗದ್ದೆಯಲ್ಲಿ ಅಪ್ಪನೊಂದಿಗೆ ಕೆಲಸ ಮಾಡುತ್ತಿದ್ದನಾನು ನೀರಿಗೆ ಧುಮುಕಿ ನಿಮ್ಮನ್ನುರಕ್ಷಿಸಿದ್ದೆ.”

ಶಿವಪ್ಪನಿಗೆ ತನ್ನ ಪರಿಚಯವಿದೆ. ಆದರೆ ತನಗೆ ಪುನರ್ಜನ್ಮವಿತ್ತ ವ್ಯಕ್ತಿಯನ್ನು ಗುರುತಿಸಲಾಗಲಿಲ್ಲ. ಅವನು ಕೇಳಿದ, “ಇಷ್ಟು ವಿಶಾಲ ಮನಸ್ಸಿನ ನೀನು ಏಕೆ ನನ್ನ ತಂದೆಯನ್ನು ಕೊಲ್ಲಲು ಬಂದೆ?”

ಶಿವಪ್ಪ ತನ್ನ ತಂದೆಯ ಆತ್ಮಹತ್ಯೆಯಿಂದ ತೊಡಗಿ ಆ ಕ್ಷಣದ ವರೆಗೆ ನಡೆದ ಘಟನೆಗಳನ್ನೆಲ್ಲ ಚಾಚೂ ತಪ್ಪದೆ ವಿವರಿಸಿದ.

ಶಶಿಕಾಂತ ಅವನ ಕಾಲಿಗಾದ ಗಾಯವನ್ನು ನೋಡಿದ. ಹೊರಗೆ ಹೋಗಿ ಮಾವಿನ ಮರದ ಗೆಲ್ಲಿಗೆ ಕಟ್ಟಿದ ಹಗ್ಗವನ್ನು ನೋಡಿ ಬಂದ. “ನನಗೆ ಪುನರ್ಜನ್ಮ ನೀಡಿದ ಪುಣ್ಯಾತ್ಮ ನೀನು. ನಿನಗೆ ಮತ್ತು ನಿನ್ನ ಕುಟುಂಬದವರಿಗೆ ನಮ್ಮಿಂದ ತುಂಬಾ ಅನ್ಯಾಯವಾಗಿದೆ. ಆದರೆ ಉಳಿದ ಎಲ್ಲಾ ಅನ್ಯಾಯಗಳನ್ನು ಸರಿಪಡಿಸಲು ಪ್ರಯತ್ನಿಸುತ್ತೇನೆ. ಕುಳಿತಿರು. ಈಗ ಬಂದೆ” ಎಂದು ಒಳಗೆ ಹೋಗಿ ಶಿವಪ್ಪನ ಸಹಿ ಹಾಕಿಸಿದ್ದ ಎಲ್ಲಾ ಕಾಗದ ಪತ್ರಗಳನ್ನು ತಂದು ಅವನಿಗೆ ಕೊಟ್ಟು ಹೇಳಿದ “ನೀನು ಒಂದು ಚಿಕ್ಕಾಸೂ ನಮಗೆ ಕೊಡಬೇಕಾಗಿಲ್ಲ. ನಿನ್ನ ತಂದೆ ಸಹಿ ಮಾಡಿದ ಕಾಗದಗಳೂ ಇದರಲ್ಲಿವೆ. ಇನ್ನು ನೀನು ನಮ್ಮ ಸಾಲಗಾರನಲ್ಲ. ನಾಳೆ ಬಂದು ನಿನಗೆ ಸಲ್ಲಬೇಕಾಗಿದ್ದ ಎರಡು ವರ್ಷಗಳ ಬೆಳೆಯ ಹಣವನ್ನು ತೆಗೆದುಕೊಂಡು ಹೋಗು. ನಿನ್ನ ಗದ್ದೆಗೆ ನೀನೇ ಯಜಮಾನ ನೀನು ಸ್ವತಂತ್ರನಾಗಿದ್ದಿ, ಏನಾದರೂ ಸಹಾಯ ಬೇಕಿದ್ದರೆ ನನ್ನ ಬಳಿ ಕೇಳು. ಹಿಂಜರಿಯಬೇಡ. ಆತ್ಮಹತ್ಯೆಯ ಕುರಿತು ಕನಸಿನಲ್ಲಿಯೂ ಯೋಚಿಸಬೇಡ.” ಎಂದು ಶಿವಪ್ಪನನ್ನು ತನ್ನ ಕಾರಿನಲ್ಲಿ ಕೂರಿಸಿ ಅವನ ಗುಡಿಸಲಿಗೆ ತಲುಪಿಸಿದ.

### ಲೇಖಕರ ಪರಿಚಯ



ವೈ. ಸತ್ಯನಾರಾಯಣ ಕಾಸರಗೋಡು ಇವರು ಕಾಸರಗೋಡಿನ ಹೆಸರಾಂತ ಕನ್ನಡ ಸಾಹಿತಿಗಳು, ಶ್ರೀಯುತರು ೦೫-೧೦-೧೯೪೦ ರಲ್ಲಿ ನೆಕ್ರಾಜೆ ಗ್ರಾಮದ ಪಿಲಿಕೂಡ್ಲು ಎಂಬಲ್ಲಿ ಜನಿಸಿದರು. ವೈ. ಪರಮೇಶ್ವರ ಇವರ ತಂದೆ, ತಾಯಿ ಪರಮೇಶ್ವರಿ ಅಮ್ಮ. ಇವರು ಕಾಸರಗೋಡಿನ ಬಿ.ಇ.ಎಂ. ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುವರು. ಪಲಾಯನ, ಕಲ್ಪವೃಕ್ಷದಲ್ಲಿ ವಿಷಬೀಜಗಳು, ಹಾಸ, ಮೋದಕ, ಉಡುಗೊರೆ, ಗ್ರಹಣ, ನಗೆಯ ಸೊಬಗು, ತಡವಾಗಿ ಬಂದ ರೈಲು, ಬಡಾಯಿ ಎಕ್ಸ್ ಪ್ರೆಸ್ ಇಂತಹ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಲಲಿತ ಪ್ರಬಂಧ, ಹನಿಗವನಗಳಿಗೆ ಬಹುಮಾನವನ್ನು ಪಡೆದಿದ್ದಾರೆ. ಇವರ 'ತಡವಾಗಿ ಬಂದ ರೈಲು' ಎಂಬ ಕಥಾ ಸಂಕಲನದಿಂದ ಪ್ರಸ್ತುತ 'ಸಾಲ' ಎಂಬ ಕಥೆಯನ್ನು ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

- ಶಿವಪ್ಪ ಗುಡಿಸಲಿನಲ್ಲಿ ಚಿಂತಾಕ್ರಾಂತನಾಗಿ ಕುಳಿತಿರುವುದು ಏಕೆ?
- ಶಿವಪ್ಪನ ಮನೆಗೆ ದಾಂಢಿಗರು ಬರಲು ಕಾರಣವೇನು ?
- ಶಿವಪ್ಪನ ಕೃಷಿ ಬಡಕಲಾಗಲು ಕಾರಣವೇನು?
- ಸಾಹುಕಾರನು ಶಿವಪ್ಪನನ್ನು ಹೇಗೆ ವಂಚಿಸಿದನು?
- ಶಶಿಕಾಂತ ಶಿವಪ್ಪನನ್ನು ಹೇಗೆ ರಕ್ಷಿಸಿದನು?

### ಟಿಪ್ಪಣಿ ಬರೆಯಿರಿ

ದೇಶದ ಬೆನ್ನೆಲುಬು ಎಂದೆಲ್ಲ ರೈತರನ್ನು ಹೊಗಳಿ ಅಟ್ಟಕ್ಕೇರಿಸುತ್ತಾರೆ. ಮಾಡಿದ ಬೆಳೆಯ ಹಣವನ್ನಾದರೂ ಕೊಟ್ಟಿದ್ದರೆ ಅಪ್ಪ ಊರುಬಿಟ್ಟು ಹೋಗುತ್ತಿರಲಿಲ್ಲ. ಶಿವಪ್ಪನ ಕಣ್ಣುಗಳು ತೇವಭರಿತವಾಗಿದ್ದುವು. ಆಗ ಇಬ್ಬರು ದಾಂಢಿಗರು ಪ್ರತ್ಯಕ್ಷರಾದರು.

- 'ಸಾಲ' ಕಥೆಯಲ್ಲಿನ ರೈತ ಶಿವಪ್ಪನು ಆತ್ಮಹತ್ಯೆಗೆ ಪ್ರಯತ್ನಿಸುವುದಕ್ಕೆ ಕಾರಣಗಳಾದ ಅಂಶಗಳನ್ನು ವಿಶ್ಲೇಷಿಸಿ ಅವನು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಸರಿಯೇ? ನಿಮ್ಮ ಅಭಿಪ್ರಾಯಗಳೊಂದಿಗೆ ಟಿಪ್ಪಣಿ ಬರೆಯಿರಿ.

## ಶೀರ್ಷಿಕೆ ನೀಡಿ ಸಮರ್ಥಿಸಿರಿ

ಸಾಲ ಎನ್ನುವ ಶೀರ್ಷಿಕೆಯ ಬದಲು ಆಶಯವನ್ನು ಪ್ರತಿಬಿಂಬಿಸುವ ಇನ್ನೊಂದು ಶೀರ್ಷಿಕೆಯನ್ನು ನೀಡಿ ಸಮರ್ಥಿಸಿ ಬರೆಯಿರಿ.

## ಓದುಗರ ಓಲೆ ಬರೆಯಿರಿ

ಸಾಹುಕಾರನ ದಬ್ಬಾಳಿಕೆಯನ್ನು ವಿವರಿಸುತ್ತಾ ಶೋಷಣೆಗೊಳಗಾದ ರೈತರ ರಕ್ಷಣೆಯನ್ನು ಮಾಡುವಂತೆ ಸರಕಾರವನ್ನು ಒತ್ತಾಯಿಸುವ ಒಂದು ಲೇಖನವನ್ನು ಪತ್ರಿಕೆಯ ಓದುಗರ ಓಲೆ ವಿಭಾಗಕ್ಕೆ ಕಳುಹಿಸುವ ಸಲುವಾಗಿ ಬರೆಯಿರಿ.

## ನಾಟಕ ರಚಿಸಿರಿ

ಸಾಲ ಕಥೆಯನ್ನು ಓದಿ ಕಥಾ ಪಾತ್ರಗಳಲ್ಲಿ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆದು ನಾಟಕ ರಚಿಸಿ ಅಭಿನಯಿಸಿರಿ.

## ಪ್ರಶ್ನೆ ತಯಾರಿಸಿರಿ

ಕೆಳಗೆ ಕೊಟ್ಟಿರುವ ಗದ್ಯಭಾಗದ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.

ಶ್ರೀರಂಗಪಟ್ಟಣ ತಾಲೂಕಿಗೆ ಸೇರಿದ ಕೊಡಿಯಾಲ ಗ್ರಾಮದ ನಿಜನಾಮ 'ಛತ್ರಿಪುರಿ' ಅಥವಾ 'ಧರ್ಮಪುರಿ' ಎಂದು ಆಗಿದೆ. ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಿ ತಮ್ಮ ಸ್ವಾವಲಂಬಿ ಜೀವನಕ್ಕೆ ದಾರಿ ಮಾಡಿಕೊಂಡಿರುವ ಈ ಗ್ರಾಮ ಎಲ್ಲರಿಗೂ ಮಾದರಿ ಆದರ್ಶ. ಪದ್ಮಶಾಲಿ ಜನಾಂಗದ ಪೂರ್ವಿಕರು ಇಲ್ಲಿ ಬಂದು ತಳವೂರಿದರು. ತೆಲುಗು ಇವರ ಮಾತೃಭಾಷೆಯಾಗಿದ್ದರೂ ಸಹ, ಪರವೂರಿನವರ ನಿಕಟ ಸಂಪರ್ಕ ಹಾಗೂ ಸ್ನೇಹ ಭಾವದಿಂದೊಡಗೂಡಿ ಅಚ್ಚ ಕನ್ನಡಿಗರೇ ಆಗಿರುವುದು ಒಂದು ವಿಶೇಷ. ಪದ್ಮಶಾಲಿ ಮನೆತನದ ವೃತ್ತಿಯಾದ ಕೈಮಗ್ಗಕ್ಕೆ ಸುಮಾರು ನೂರು ವರ್ಷಗಳ ಇತಿಹಾಸವಿದೆ. ಸುಮಾರು ಐನೂರು ಕುಟುಂಬಗಳು ಈ ವೃತ್ತಿಯನ್ನು ಅವಲಂಬಿಸಿ ಬದುಕು ನಡೆಸುತ್ತಿತ್ತು. ೧೯೭೦ ನೇ ಇಸವಿಯಲ್ಲಿ ಸರಕಾರ 'ಪವರ್ ಲೂಂ'(ವಿದ್ಯುತ್ ಮಗ್ಗ) ಗೆ ಸಾಲ ಮಂಜೂರಾತಿ ನೀಡಿತು. ಅದಕ್ಕಾಗಿ ಒಂದು ಸೊಸೈಟಿಯ ಸ್ಥಾಪನೆಯಾಯಿತು. ಅನಂತರ ಸೊಸೈಟಿಯು ಆರ್ಥಿಕವಾಗಿ ಚೇತರಿಸಿಕೊಳ್ಳುತ್ತಾ ಜನರ ಅಭಿರುಚಿಯನ್ನು ಗುರುತಿಸಿ ಹೊಸ ವಿನ್ಯಾಸ ಹೊಂದಿದ ಬಟ್ಟೆಗಳನ್ನು ಆಯಾ ಕಾಲಕ್ಕೆ ತಕ್ಕಂತೆ ನೇಯುತ್ತಾ ಬಂದಿದ್ದು ಇಂದು ಈ ಗ್ರಾಮದಲ್ಲಿ ಇನ್ನೂರು ಯಾಂತ್ರಿಕ ಮಗ್ಗಗಳು ಕೆಲಸ ಮಾಡುತ್ತಿವೆ.

# ಪರರಿಗೆ ಮುದವನಾಚರಿಸುವುದು ಗುಣವು

**- ಕುಮಾರವ್ಯಾಸ**

ಸಂದರ್ಭ : ದ್ಯೂತದಲ್ಲಿ ಸೋತ ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಅನುಭವಿಸುವುದಕ್ಕೆ ದ್ವೈತವನವನ್ನು ಪ್ರವೇಶಿಸುತ್ತಾರೆ. ಕೌರವರು ಪಾಂಡವರ ವನವಾಸವನ್ನು ಕೆಡಿಸುವುದಕ್ಕಾಗಿ ದ್ವೈತವನಕ್ಕೆ ಬರುತ್ತಾರೆ. ಅಲ್ಲಿ ಕೌರವನು, ಚಿತ್ರಸೇನನೆಂಬ ಗಂಧರ್ವನಿಂದ ಬಂಧಿಸಲ್ಪಡುತ್ತಾನೆ. ಆಗ ಭಾನುಮತಿಯು ಕೌರವನನ್ನು ಬಿಡಿಸಿಕೊಡಬೇಕೆಂದು ಧರ್ಮರಾಯನಲ್ಲಿ ಬಿನ್ನವಿಸುತ್ತಾಳೆ.

ಅರಸಿಯರು ಸಖಿಯರು ಕುಮಾರಿಯ
ರರಸನನುಜನ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ
ಕರುಣಿ ರಕ್ಷಿಸು ಸೋಮವಂಶೋ
ದ್ಧರಣ ರಕ್ಷಿಸು ಸತ್ಯಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಕೆಡೆದಳಂಘ್ರಿಯಲಿ ||೧||



ಖಳರು ಕೌರವರಿಂದು ಸಜ್ಜನ
ಕುಲ ಶಿರೋಮಣಿ ನೀನು ಕರುಣಾ
ಜಲಧಿ ನೀನಪರಾಧಿಗಳು ನಾವಹೆವು ಜಗವರಿಯೆ
ಹುಳಿಗೆ ಹಾಲಳುಕಿದರೆ ಹಾಲಿನ
ಜಲಧಿ ಕೆಡುವುದೆ ಜೀಯ ತನ್ನವ
ರೆಳೆಸಿಕೊಂಡರು ಕಾಯಬೇಕೆಂದೊರಲಿದಳು ತರಳೆ || ೨ ||

ಆವನಾಗಲಿ ಬೇಡಿದಂಗೊಲಿ
ದೀವುದೇ ನೃಪಧರ್ಮ ಹಗೆ ಕೆಳೆ
ಯಾವನಾಗಲಿ ಸೆಣಸಿದಡೆ ಕಾದುವುದೆ ನೃಪನೀತಿ
ಆವನಾಗಲಿ ಶರಣುವೊಕ್ಕರೆ
ಕಾವುದೇ ಕ್ಷತ್ರಿಯರ ಮತವಿಂ
ತಾವುದುಚಿತವು ಭೀಮ ನೀ ಹೇಳೆಂದನಾ ಭೂಪ || ೩ ||

ಅದರಿನಾಚೆಯ ಭವದ ದುಷ್ಕೃತ
ವೊದಗಿತೀ ಜನ್ಮದಲಿ ವನವಾ
ಸದ ಪರಿಕ್ಲೇಶಾನುಭವಕಿವರೇನ ಮಾಡುವರು
ಒದಗಿದುತ್ಸವದಲ್ಲಿ ಪರರ
ಭೃದಯವನು ಬಯಸುವದು ಪರರಿಗೆ
ಮುದವನಾಚರಿಸುವುದು ಧರ್ಮಜ್ಞರಿಗೆ ಗುಣವೆಂದ || ೪ ||

ಎಣಿಸಲೇಕಿನ್ನದನು ಕೌರವ
ಗಣ ಮರಳಿ ಬಂದಲ್ಲದಾರೋ
ಗಣೆಯ ಮಾಡೆನು ಪಾರ್ಥ ನೀ ನುಡಿ ನಿನ್ನ ಹವಣೇನು
ರಣದೊಳರಿಗಳ ಮುರಿದು ಕುರುಧಾ
ರುಣಿಪತಿಯ ತಹುದುಂಟೆಯೆನೆ ಬಿಲು
ಗಣೆಗಳನ್ನು ತಿದ್ದಿದನು ಫಲುಗುಣ ಹೂಡಿದನು ರಥವ || ೫ ||

ಎಮಗೆ ನುಡಿ ಬೇರುಂಟೆ ನೀತಿ
ಭ್ರಮಿತರಾವಲ್ಲನಿಲಸುತನು
ಭ್ರಮಿತನವ ಸೈರಿಸುವುದೈ ಕಾರುಣ್ಯನಿಧಿ ನೀನು
ನಿಮಿಷದಲಿ ಗಂಧರ್ವಕನನಾ
ಕ್ರಮಿಸಿ ಕೌರವಗಣವನೀ ಪದ
ಕಮಲದಿದಿರಲಿ ಕೆಡಹಿತೋರುವೆನೆಂದು ಹೊರವಂಟ || ೬ ||

ಬಿಡುವೆಯಾದರೆ ನೃಪನ ಸೆರೆಯನು
ಬಿಡಿಸುವೆನು ಮೇಣಲ್ಲದಿರ್ದೊಡೆ
ಬಿಡಿಸುವೆನು ನಿನ್ನಸುರ ಸೆರೆಯನು ನಿನ್ನ ದೇಹದಲಿ
ನುಡಿಗೆ ತೆರಹಿಲ್ಲೇಳೆನುತ ಕೈ
ಗಡಿಯಲೆಚ್ಚನು ಕಾಲಕೂಟದ
ಕಡಲು ಕವಿವಂದದಲಿ ಕವಿದವು ಪಾರ್ಥನಂಬುಗಳು || ೭ ||

ಸೋಲವೆಮ್ಮದು ನಿಮ್ಮ ತಮ್ಮನೆ
ಮೇಲುಗೈ ನಿಮ್ಮಡಿಗಳಾಜ್ಞಾ
ಪಾಲಕರು ಭೀಮಾರ್ಜುನರು ಮಾದ್ರೀಕುಮಾರಕರು
ಕಾಳಗದೊಳೆಮ್ಮಖಿಳ ಖಚರರ
ಧೂಳಿಪಟಮಾಡಿದನು ಲಕ್ಷ್ಮೀ
ಲೋಲ ನಿಮಗೊಲಿದಿಹನು ಗದುಗಿನ ವೀರನಾರಯಣ || ೮ ||

**ಕವಿ ಪರಿಚಯ**



'ಕುಮಾರವ್ಯಾಸ' ಎಂಬ ಕಾವ್ಯನಾಮದಿಂದ ಪ್ರಸಿದ್ಧನಾದ ಕವಿ ಗದುಗಿನ ನಾರಣಪ್ಪ. ಇವನ ಹುಟ್ಟೂರು ಗದುಗಿನ ಕೋಳಿವಾಡ ಗ್ರಾಮ. ಸುಮಾರು ಹದಿನೈದನೇ ಶತಮಾನದಲ್ಲಿ ಜೀವಿಸಿದ್ದ ಕವಿ ಕುಮಾರವ್ಯಾಸನು, ವ್ಯಾಸಭಾರತವನ್ನು ಆಧರಿಸಿ ಕನ್ನಡದಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯವನ್ನು ರಚಿಸಿರುವನು. ಇದನ್ನು ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂದೂ ಕರೆಯುತ್ತಾರೆ. 'ಐರಾವತ' ಎಂಬ ಇನ್ನೊಂದು ಕೃತಿಯನ್ನು ಕುಮಾರವ್ಯಾಸನು ರಚಿಸಿರುವನು. ಕಾವ್ಯದಲ್ಲಿ ರೂಪಕಲಂಕಾರವನ್ನು ಯಥೇಚ್ಛವಾಗಿ ಬಳಸಿ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದಿಗೂ ಪಾತ್ರನಾಗಿರುವನು. ನಡುಗನ್ನಡ ಸಾಹಿತ್ಯದಲ್ಲಿ ಈತನ ಗದುಗಿನ ಭಾರತ ಕಾವ್ಯ ಅತ್ಯಂತ ಪ್ರಸಿದ್ಧವಾಗಿದೆ. 'ಪರರಿಗೆ ಮುದವನಾಚರಿಸುವುದು ಗುಣವು' ಕಾವ್ಯಭಾಗವನ್ನು ಕರ್ಣಾಟ ಭಾರತ ಕಥಾ ಮಂಜರಿ ಕಾವ್ಯದ ಅರಣ್ಯಪರ್ವದಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಹಾಡಿರಿ

ಕಾವ್ಯಭಾಗವನ್ನು ರಾಗ, ತಾಳ, ಲಯ ಬದ್ಧವಾಗಿ ಹಾಡಿ ಆಸ್ವಾದಿಸಿರಿ.

### ಉತ್ತರಿಸಿರಿ

- ಧರ್ಮರಾಜನ ಬಳಿಗೆ ಯಾರೆಲ್ಲಾ ಬಂದರು?
- ಭಾನುಮತಿ ಧರ್ಮರಾಜನ ಬಳಿಗೆ ಬಂದು ಏನೆಂದು ಕೇಳಿಕೊಳ್ಳುತ್ತಾಳೆ?
- ಭಾನುಮತಿಯ ಅಳಲನ್ನು ಕೇಳಿದ ಧರ್ಮರಾಯನು ಭೀಮನಿಗೆ ಹೇಳುವ ನೀತಿಯ ಮಾತುಗಳು ಯಾವುವು?
- ಧರ್ಮರಾಜನ ಮಾತುಗಳಿಗೆ ಅರ್ಜುನನು ಕೊಟ್ಟ ಉತ್ತರವೇನು?

### ಆಶಯ ಬರೆಯಿರಿ

'ಪರರಿಗೆ ಮುದವನಾಚರಿಸುವುದು ಗುಣವು' ಕಾವ್ಯಭಾಗದ ಆಶಯ ಬರೆಯಿರಿ.

### ಆರಿಸಿ ಬರೆಯಿರಿ

ಕೆಳಗೆ ನೀಡಲಾದ ಗದ್ಯ ಭಾಗದ ಆಶಯಕ್ಕೆ ಸಮಾನವಾದ ಭಾಗವನ್ನು ಕಾವ್ಯ ಭಾಗದಿಂದ ಆಯ್ದು ಬರೆಯಿರಿ.

- ಭಾನುಮತಿ "ಕೌರವರು ದುಷ್ಟರು. ನೀನು ಸಜ್ಜನ ಕುಲ ಶಿರೋಮಣಿ, ಕರುಣೆಯುಳ್ಳವ. (ಕರುಣಾ ಸಮುದ್ರ) ಜಗತ್ತೇ ತಿಳಿದಿರುವಂತೆ ನಾವು ಪಾಪಿಗಳು. ಹುಳಿಗೆ ಹಾಲು ಅಳುಕಿದರೆ ಹಾಲಿನ ಸಮುದ್ರ ಕೆಡುತ್ತದೆಯೇ? ಜೀಯಾ ತನ್ನವರೆಂದು ತಿಳಿದುಕೊಂಡು ನೀನು ನಮ್ಮನ್ನು ಕಾಯಬೇಕು" ಎಂದು ಪ್ರಾರ್ಥಿಸಿ ಭಿನ್ನವಿಸಿದಳು.
- ನಮಗೆ ಸೋಲಾಯಿತು. ನಿಮ್ಮ ತಮ್ಮನೇ ಗೆದ್ದನು. ನಿಮ್ಮ ಆಜ್ಞಾಪಾಲಕರು ಭೀಮಾರ್ಜುನ, ಮಾದ್ರಿಕುಮಾರರು. ಕಾಳಗದಲ್ಲಿ ನಮ್ಮ ಎಲ್ಲಾ ಖಚರರನ್ನು ಅರ್ಜುನ ಧೂಳಿಪಟ ಮಾಡಿದನು. ಲಕ್ಷ್ಮಿಲೋಲಾ ಗದುಗಿನ ವೀರನಾರಾಯಣರು, ನಿಮಗೊಲಿದಿದ್ದಾನೆ ಎಂದು ಭಿನ್ನವಿಸಿದನು.

### ಇಷ್ಟವಾದ ಪದ್ಯ ತಿಳಿಸಿರಿ

'ಪರರಿಗೆ ಮುದವನಾಚರಿಸುವುದು ಗುಣವು' ಕಾವ್ಯಭಾಗದಲ್ಲಿ ನಿಮಗೆ ಇಷ್ಟವಾದ ಪದ್ಯ ಯಾವುದು? ಯಾಕೆ ಇಷ್ಟವಾಯಿತು? ಎಂಬುದನ್ನು ನಿಮ್ಮ ವಾಕ್ಯಗಳಲ್ಲಿ ತಿಳಿಸಿರಿ.

## ಸ್ವಾರಸ್ಯ ಬರೆಯಿರಿ

'ಹುಳಿಗೆ ಹಾಲಳುಕಿದರೆ ಹಾಲಿನ ಜಲಧಿ ಕೆಡುವುದೇ?' ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ.

## ಪಾತ್ರ ಚಿತ್ರಣ ಮಾಡಿರಿ

ಆವನಾಗಲಿ ಶರಣುವೊಕ್ಕರೆ
ಕಾವುದೇ ಕ್ಷತ್ರಿಯರ ಮತವಿಂ
ತಾವುದುಚಿತವು ಭೀಮ ನೀ ಹೇಳೆಂದನಾ ಭೂಪ

'ಪರರಿಗೆ ಮುದವನಾಚರಿಸುವುದು ಗುಣವು' ಎನ್ನುವ ಕಾವ್ಯದ ಮೇಲಿನ ಸಾಲುಗಳು ಮತ್ತು ಒಟ್ಟು ಕಾವ್ಯ ಭಾಗದ ಹಿನ್ನೆಲೆಯಲ್ಲಿ ಧರ್ಮರಾಯನ ಪಾತ್ರ ಚಿತ್ರಣ ಮಾಡಿರಿ.

## ಕಿರು ಪ್ರಬಂಧ ಬರೆಯಿರಿ

ಆವನಾಗಲಿ ಬೇಡಿದಂಗೊಲಿ
ದೀವುದೇ ನೃಪಧರ್ಮ ಹಗೆ ಕೆಳೆ
ಯಾವನಾಗಲಿ ಸೆಣಸಿದಡೆ ಕಾದುವುದೆ ನೃಪನೀತಿ

ಕಾವ್ಯ ಭಾಗದ ಮೇಲಿನ ಸಾಲು ಮತ್ತು ಕಾವ್ಯದ ಆಧಾರದಲ್ಲಿ ಪರಸ್ಪರ ಇರಬೇಕಾದ ಮಾನವೀಯ ಗುಣಗಳ ಕುರಿತು ಕಿರು ಪ್ರಬಂಧವನ್ನು ಬರೆಯಿರಿ.

## ವಿಂಗಡಿಸಿ ಬರೆಯಿರಿ

ಕುಮಾರಿಯರು + ಅರಸನ + ಅನುಜನ = ಕುಮಾರಿಯರರಸನನುಜನ

ಕೆಡೆದಳು + ಆಂಘ್ರಿಯಲಿ = ಕೆಡೆದಳಂಘ್ರಿಯಲಿ

ರಕ್ಷಿಸು + ಎನುತ್ತ = ರಕ್ಷಿಸೆನುತ್ತ

ಇಂಥ ಪದಗಳನ್ನು ಕಾವ್ಯ ಭಾಗದಿಂದ ಹುಡುಕಿ ವಿಂಗಡಿಸಿ ಬರೆಯಿರಿ.

## ಪ್ರಸ್ತಾರ ಹಾಕಿರಿ

∪∪∪|∪∪ ∪∪|∪∪ ∪|– ∪∪
ಅರಸಿ|ಯರು ಸಖಿ|ಯರು ಕು|ಮಾರಿಯ

∪∪∪|∪∪ ∪∪|– ∪|∪∪∪∪
ರರಸ|ನನುಜನ |ಹೆಂಡಿ|ರನಿಬರು

∪∪∪|– ∪∪|– ∪|∪∪ ∪∪|∪∪∪|– ∪∪|–
ವೆರೆಸಿ|ಬಂದಳು |ಭಾನು|ಮತಿ ಯಮ|ತನುಜ|ನಾಶ್ರಮ|ಕೆ

∪∪∪|–∪∪|– ∪|– –
ಕರುಣಿ |ರಕ್ಷಿಸು |ಸೋಮ|ವಂಶೋ

∪∪∪|–∪∪|–∪|– ∪ ∪
ದ್ಧರಣ |ರಕ್ಷಿಸು |ಸತ್ಯ|ಧರ್ಮದ

∪∪∪|–∪∪|– ∪|– ∪∪|∪∪∪|– ∪ ∪|–
ಸಿರಿಯೆ |ರಕ್ಷಿಸೆ |ನುತ್ತ|ದೊಪ್ಪನೆ |ಕೆಡೆದ|ಳಂಘ್ರಿಯ|ಲಿ

ಷಟ್ಪದಿ ಎಂದರೆ ಆರುಸಾಲಿನ ಪದ್ಯ ಜಾತಿ. ಇದರಲ್ಲಿ ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮಾನವಾಗಿರುತ್ತದೆ. ಷಟ್ಪದಿಗಳಲ್ಲಿ 1, 2 ಮತ್ತು 4, 5 ಪಾದಗಳಲ್ಲಿ ಮೂರು ಮಾತ್ರೆಯ ಮೇಲೆ ನಾಲ್ಕು ಮಾತ್ರೆಯ ಗಣಗಳಿದ್ದು ಒಟ್ಟು ನಾಲ್ಕು ಗಣಗಳಿರುತ್ತವೆ. (3+4+3+4) ಇವು ಕಿರಿಯ ಪಾದಗಳು. 3 ಮತ್ತು 6ನೇ ಪಾದಗಳು ಉದ್ದವಾಗಿದ್ದು ಅವುಗಳಲ್ಲಿ ಆರು ಆರು ಗಣಗಳಿವೆ. (3+4+3+4+3+4) ಬಳಿಕ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಪರಿಗಣಿಸುವುದು. ಈ ಷಟ್ಪದಿಗೆ "ಭಾಮಿನಿ ಷಟ್ಪದಿ" ಎಂದು ಹೆಸರು.

## ಮಾತ್ರೆಗಳು

ಒಂದು ಹ್ರಸ್ವಸ್ವರ ಅಥವಾ ಹ್ರಸ್ವಸ್ವರ ಸಹಿತವಾದ ಒಂದು ವ್ಯಂಜನವನ್ನು ಉಚ್ಚರಿಸಲು ಬೇಕಾಗುವ ಕಾಲವೇ ಒಂದು ಮಾತ್ರಾ ಕಾಲ. ಮಾತ್ರೆಗಳಲ್ಲಿ 'ಲಘು' ಮತ್ತು 'ಗುರು' ಎಂಬ ಎರಡು ವಿಧಗಳಿವೆ. ಅಕ್ಷರದ ತಲೆಯ ಮೇಲೆ '∪' ಚಿಹ್ನೆ ಹಾಕಿ 'ಲಘು'ವನ್ನು ಗುರುತಿಸಲಾಗುವುದು. ಅಕ್ಷರದ ತಲೆಯ ಮೇಲೆ '-' ಚಿಹ್ನೆ ಹಾಕಿ 'ಗುರು'ವನ್ನು ಗುರುತಿಸಲಾಗುವುದು.

- ಕಾವ್ಯ ಭಾಗದ ಉಳಿದ ಪದ್ಯಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿರಿ.

# ಅರ್ಥಕೋಶ

ಅಖಿಲ - ಸಕಲ, ಎಲ್ಲಾ
ಅಧಿಕಾರಿ - ಅಧಿಕಾರವುಳ್ಳವ, ಮುಖ್ಯಸ್ಥ
ಅನತಿ - ಸ್ವಲ್ಪ
ಅನನ್ಯ - ಅದ್ವಿತೀಯ, ಬೇರೆಯಲ್ಲದ
ಅನರ್ಘ್ಯ - ಅಮೂಲ್ಯ
ಅನುಕಂಪ - ಸಹಾನುಭೂತಿ
ಅನುಜ - ತಮ್ಮ
ಅನುತಾಪ - ಪಶ್ಚಾತ್ತಾಪ, ಕನಿಕರ
ಅನ್ಯೋನ್ಯ - ಪರಸ್ಪರ
ಅನ್ವಯ - ಹೊಂದಿಸು, ಜೋಡಿಸು
ಅಪಪ್ರಚಾರ - ಸುಳ್ಳು ಸುದ್ದಿಯ ಹರಡುವಿಕೆ
ಅಬಲೆ - ನಾರಿ, ಹೆಂಗಸು, ಬಲಹೀನೆ
ಅಂಘ್ರಿ - ಪಾದ
ಅಂಬು - ಬಾಣ
ಅಭಯ - ಭಯವಿಲ್ಲದ, ಆಶ್ರಯ
ಅಭಯಾರಣ್ಯ - ಪ್ರಾಣಿಗಳು ನಿರ್ಭಯವಾಗಿ ಬದುಕುವ ಕಾಡು
ಅಭ್ಯುದಯ - ಏಳಿಗೆ
ಅರಿ - ವೈರಿ, ತಿಳಿ
ಅಲಕ್ಷ್ಯ - ಗಮನ ಕೊಡದ
ಅಹೆವು - ಆಗುವೆವು, ಅಪ್ಪೆವು
ಅಳಿವೆ - ನದಿಗಳು ಸಮುದ್ರಕ್ಕೆ ಸೇರುವ ಪ್ರದೇಶ
ಅಳುಕು - ಭಯ, ಹೆದರಿಕೆ
ಆಘಾತ - ಪೆಟ್ಟು
ಆಂದೋಲನ - ಚಳುವಳಿ, ತೂಗಾಡುವಿಕೆ
ಆಯಾಮ - ಉದ್ದ, ಹರಹು
ಆರೋಗಣೆ - ಊಟ , ಭೋಜನ
ಆಸರೆ - ಅವಲಂಬನೆ , ಆಶ್ರಯ
ಇಕ್ಕಟ್ಟು - ಸ್ಥಳ ಸಾಲದೆ ಚಲಿಸಲಾಗದ ಸ್ಥಿತಿ
ಇಕ್ಕಡೆ - ಎರಡು ಭಾಗಗಳು
ಇಂಗಿತ - ಆಶಯ
ಇಂಪಾಗಿ - ಸವಿಯಾಗಿ, ಮಧುರವಾಗಿ
ಇಳೆ - ಭೂಮಿ
ಉಜ್ವಲ - ಪ್ರಕಾಶಮಾನವಾದ
ಉಳು - ಉಳುವುದು
ಉತ್ಪತ್ತಿ - ಉಗಮ , ಬೆಳೆ,ಲಾಭ
ಉತ್ಪತ್ತಿ - ಉತ್ಪಾದನೆ, ಸೃಷ್ಟಿ
ಉದ್ಯಮ - ಉದ್ಯೋಗ, ಕೈಗಾರಿಕೆ
ಉದ್ವೇಗ - ಭಾವಾವೇಶ
ಉರುವಲು - ಕಟ್ಟಿಗೆ, ಸೌದೆ
ಉಸಾಬರಿ - ಸುದ್ದಿ, ಗೊಡವೆ, ವಿಷಯ
ಎಕರೆ - ಭೂಮಿಯ ಒಂದು ಅಳತೆ
ಎಗರು - ಜಿಗಿ, ಹಾರು
ಏಕಾಂಗಿ - ಒಬ್ಬಂಟಿ
ಏಳಿಗೆ - ಉನ್ನತಿ,ಹೆಚ್ಚಳ
ಏಳು - ಗೆಲುವು
ಒರಗು - ಬಾಗು, ಅಡ್ಡಾಗು, ಮಾಲು, ವಾಲು
ಒರಲು - ಗೋಳಿಡು
ಓಲೆ - ಕಾಗದ, ಪತ್ರ, ತಾಳೆ ಗರಿ
ಕಗ್ಗಾಡು - ದಟ್ಟವಾದ ಕಾಡು
ಕಟಾವು - ಕೊಯ್ಲು
ಕಡವು - ಹೊಳೆಯನ್ನು ದಾಟುವ ಸ್ಥಳ
ಕಡಿವಾಣ - ನಿಯಂತ್ರಣ
ಕಣ್ಬಿಡುವ - ಕಣ್ಣು ತೆರೆಯುವ
ಕಥಾ ಹಂದರ - ಕಥೆಯ ವ್ಯಾಪ್ತಿ
ಕಲಬೆರಕೆ - ದುರ್ಮಿಶ್ರಣ
ಕಲರವ - ಮಧುರ ಶಬ್ದ
ಕಲಶ - ಗೋಪುರಕ್ಕೆ ಹಾಕುವ ಲೋಹ ಶಿಖರ, ಪೂಜೆಯಲ್ಲಿ ನೀರು ತುಂಬಿಡುವ ಚೆಂಬು
ಕಲಾಸಂಪದ - ಕಲೆಯ ಸಂಪತ್ತು
ಕಲ್ಲೋಲ - ದೊಡ್ಡ ಅಲೆ, ಹೊಯ್ದಾಟ

ಕವಿಯು - ಸುತ್ತಲೂ ಹಬ್ಬು
ಕಸುವು - ಬಲ
ಕಳಪೆ - ಅತ್ಯಂತ ಕೆಳಮಟ್ಟದ
ಕಾರ್ಗಾಲ - ಮಳೆಗಾಲ
ಕಾರ್ಮೋಡ - ಕಪ್ಪಗಿನ ಮೋಡ, ಮಳೆ ಸುರಿಸುವ ಮೋಡ
ಕುಕ್ಕರಗಾಲು - ಮಂಡಿಗಳನ್ನು ಮಡಚಿಕೊಂಡು ತುದಿಗಾಲ ಮೇಲೆ ಭಾರ ಹಾಕಿ ಕುಳಿತು ಕೊಳ್ಳುವುದು
ಕುಡುಗೋಲು - ಕತ್ತಿ
ಕುಲದೀಪಕರು - ಕುಲವನ್ನು ಬೆಳಗುವವರು
ಕೂಲಂಕಷ - ಸೂಕ್ಷ್ಮ
ಕೂಲಿ - ಸಂಬಳ
ಕೆಚ್ಚೆದೆ - ಧೈರ್ಯ
ಕೆಂಜಿಗೆ - ಒಂದು ಜಾತಿಯ ಪೊದರು ಸಸ್ಯ
ಕೆಡರು - ಕೆಳಕ್ಕೆ ಬೀಳಿಸು
ಕೆಡಹು - ಬೀಳಿಸು
ಕೆಳೆ - ಗೆಳೆತನ
ಕೊಳಚೆ - ಕೆಸರು, ಹೊಲಸು
ಖಚರ - ಆಕಾಶಗಾಮಿ, ಗಂಧರ್ವ
ಖಳ - ದುಷ್ಟ
ಗಂಜಲ - ಪಶುಗಳ ಮೂತ್ರ, ಸೆಗಣಿ
ಗಣ - ಸಮೂಹ, ಗುಂಪು
ಗಂಭೀರ - ಗಹನ
ಗಿಟ್ಟು - ಸಿಗು,ದಕ್ಕು
ಗಿರಿತರಂಗ - ಏರುತಗ್ಗುಗಳಿಂದ ಕೂಡಿದ ಬೆಟ್ಟಗಳು
ಗುಂಗುರು - ಉಂಗುರ ಉಂಗುರವಾಗಿರುವ
ಗುಮ್ಮಿ - ಗುಂಪು, ಸಮೂಹ
ಘಾಟಿರಸ್ತೆ - ಬೆಟ್ಟಗಳ ನಡುವೆ ಇಕ್ಕಟ್ಟಾದ ರಸ್ತೆ
ಚಪ್ಪಡಿ - ಚಪ್ಪಟೆಯಾದ ಹಲ್ಲು
ಚಿಕ್ಕಾಸು - ಸ್ವಲ್ಪ ಹಣ, ಮೌಲ್ಯವಿಲ್ಲದ
ಚಿಂತಾಕ್ರಾಂತ - ಚಿಂತೆಯಿಂದ ಕೂಡಿದ
ಚಿರಸ್ಮರಣೀಯ - ಶಾಶ್ವತವಾಗಿ ನೆನಪಿಡತಕ್ಕ
ಚೆಂಬಣ್ಣ - ಕೆಂಪು ಬಣ್ಣ
ಜಟಕಾ ಗಾಡಿ - ಕುದುರೆ ಗಾಡಿ
ಜಡ - ಚಲಿಸದ, ನಿಶ್ಚಲ
ಜಪ್ತಿ - ಮುಟ್ಟುಗೋಲು
ಜಮೀನು - ಭೂಮಿ, ಹೊಲ
ಜರೀಗಿಡ - ನೀರಿನಲ್ಲಿ ಬೆಳೆಯುವ ಒಂದು ಜಾತಿಯ ಸಣ್ಣ ಸಸ್ಯ
ಜಲಧಿ - ಸಮುದ್ರ
ಜಲ್ಲೆ, ಜಲ್ಲು - ಹುಟ್ಟು ಹಾಕುವ ಕೋಲು
ಜಿನುಗು - ಸುರಿಯು
ಜೋಪಡಿ - ಸಣ್ಣ ಗುಡಿಸಲು
ಜ್ಞಾನ - ತಿಳಿವು, ಅರಿವು
ಝೇಂಕಾರ - ದುಂಬಿಗಳ ಮಧುರ ಧ್ವನಿ
ಟಿಸಿಲು - ರೆಂಬೆ
ತಂಗು - ಒಂದೆಡೆ ನಿಲ್ಲು
ತತ್ತರ - ನಡುಕ, ಕಂಪಿಸು
ತನುಜ - ಮಗ
ತರಳೆ - ಹೆಣ್ಣು
ತರಾವರಿ - ಬಗೆ ಬಗೆಯ
ತಾಳಗತಿ - ತಾಳದ ಲೆಕ್ಕ
ತೀಕ್ಷ್ಣಮತಿ - ಚುರುಕು ಬುದ್ಧಿ
ತುರ್ತಾಗಿ - ಜರೂರಾಗಿ
ತೇವ - ನೀರಿನಂಶ
ತೊಳೆ - ದೋಣಿ ನಡೆಸುವ ಹುಟ್ಟು, ಸ್ವಚ್ಛಗೊಳಿಸು
ದಕ್ಕಿಸು - ಜೀರ್ಣ ಮಾಡಿಕೊಳ್ಳು
ದರ್ಪ - ಅಹಂಕಾರ
ದಹಿಸು - ಸುಡು
ದಾಂಡಿಗ - ಕಟ್ಟುಮಸ್ತಾದ ಆಳು
ದಾಯಾದಿ - ರಕ್ತ ಸಂಬಂಧಿಕರು, ಹಕ್ಕುದಾರರು
ದಿಗಂತ - ದಿಕ್ಕಿನ ಕೊನೆ, ಭೂಮಿ ಆಕಾಶಗಳ ಸಂಗಮ ಸ್ಥಾನ

| | | |
|---|---|---|
| ದುರ್ಘಟನೆ | - | ಅಶುಭ ಸಂಗತಿ,ದುಃಖದಾಯಕ ಘಟನೆ |
| ದೌರ್ಜನ್ಯ | - | ಪೀಡೆ, ಉಪದ್ರವ |
| ಧನ್ಯ | - | ಕೃತಾರ್ಥ |
| ಧರೆ | - | ಭೂಮಿ |
| ಧರೆಗುರುಳು | - | ಭೂಮಿಗೆ ಬೀಳು |
| ಧರ್ಮಜ್ಞ | - | ಧರ್ಮವನ್ನು ತಿಳಿದವ |
| ನಂದನವನ | - | ಆನಂದವನ್ನು ನೀಡುವ ವನ, ಸ್ವರ್ಗದ ಉದ್ಯಾನ |
| ನಂದಾದೀವಿಗೆ | - | ನಂದಿ ಹೋಗಲೇ ಬಾರದ ದೀಪ |
| ನರೆ | - | ಮುಪ್ಪು, ಬಿಳಿ ಕೂದಲು |
| ನಳ ನಳಿಸು | - | ಶೋಭಿಸು, ಚಂದಕಾಣು |
| ನಾಗಾಲೋಟ | - | ನಾಲ್ಕು ಕಾಲುಗಳ ಓಟ |
| ನಿತ್ಯಹರಿದ್ವರ್ಣ | - | ಸದಾ ಹಸಿರಾಗಿರುವ ಬಣ್ಣ |
| ನಿರಕ್ಷರ | - | ಅಕ್ಷರಜ್ಞಾನ ಇಲ್ಲದ |
| ನಿರುಕಿಸು | - | ನಿರೀಕ್ಷಿಸು ,ಪರಿಶೀಲನೆ ಮಾಡು |
| ನಿರ್ವಹಣೆ | - | ಉಸ್ತುವಾರಿ |
| ನಿಲ್ಮನೆ | - | ತಂಗು ಮನೆ , ತಂಗುವೆಡೆ |
| ನಿವೃತ್ತ | - | ಸೇವೆಯಿಂದ ವಿರಮಿಸಿದ |
| ನಿಷ್ಕಪಟ | - | ವಂಚನೆಯಿಲ್ಲದ |
| ನೃಪ | - | ರಾಜ |
| ನೆತ್ತಿ | - | ತಲೆಯ ಮಧ್ಯಭಾಗ |
| ನೇಸರು | - | ಸೂರ್ಯ, ರವಿ |
| ಪರಿಕ್ಲೇಶ | - | ಕಷ್ಟ |
| ಪರ್ವತಶ್ರೇಣಿ | - | ಬೆಟ್ಟಗಳ ಸಾಲು |
| ಪವಾಡ | - | ಅದ್ಭುತ ಕಾರ್ಯ ,ಅತಿಮಾನುಷ ಕೃತ್ಯ |
| ಪಸರಿಸು | - | ಹರಡಿಸು |
| ಪಾಡು | - | ರೀತಿ, ಸ್ಥಿತಿ |
| ಪಾತರಗಿತ್ತಿ | - | ಬಣ್ಣದ ಚಿಟ್ಟೆ |
| ಪಾರಾವಾರ | - | ಸಮುದ್ರ |
| ಪಾರ್ಥೇನಿಯಂ | - | ಒಂದು ಜಾತಿಯ ಕಳೆಗಿಡ |
| ಪಿಸುಗುಟ್ಟು | - | ಮೆಲುದನಿಯಲ್ಲಿ ಹೇಳು |
| ಪುನರ್ಜನ್ಮ | - | ಮತ್ತೆ ಹುಟ್ಟುವುದು |
| ಪೂರ್ವಪದ | - | ಮೊದಲ ಪದ |
| ಪೆಸರಿಸು | - | ಹೆಸರಿಸು |
| ಪ್ರಕಟ | - | ಬಹಿರಂಗ |
| ಪ್ರಚಂಡ | - | ಬಲಶಾಲಿ |
| ಪ್ರಸ್ತುತ | - | ವರ್ತಮಾನ ಕಾಲದ |
| ಬಡಕಲು | - | ಕ್ಷೀಣ |
| ಬಣವೆ | - | ಹುಲ್ಲಿನ ರಾಶಿ |
| ಬಾಣಿ | - | ದೋಣಿಯ ಮೂತಿ |
| ಬಾಳು | - | ಬದುಕು |
| ಬಿತ್ತರ | - | ವಿಸ್ತಾರ |
| ಬಿಂದಿಗೆ | - | ಚಿಕ್ಕ ಕೊಡ, ತಂಬಿಗೆ |
| ಬುವಿ | - | ಭೂಮಿ |
| ಬೆಡಗು | - | ಚಂದ |
| ಬೆಳ್ಮುಗಿಲು | - | ಬೆಳ್ಳಗಿರುವ ಮೋಡ |
| ಬೇಸಾಯ | - | ವ್ಯವಸಾಯ, ಕೃಷಿ |
| ಭಣಗುಟ್ಟು | - | ಬರಿದಾಗಿ ಕಾಣು |
| ಭವ | - | ಇರುವಿಕೆ, ಜನ್ಮ, ಶಿವ |
| ಭೀಕರ | - | ಭಯವನ್ನುಂಟು ಮಾಡುವ |
| ಭೂಪ | - | ರಾಜ, ಭೂಮಿಯ ಒಡೆಯ |
| ಭೇರಿ | - | ರಾಜರುಗಳ ಸವಾರಿಯ ಮುಂದೆ ಬಡಿಯುತ್ತಿದ್ದ ಢಕ್ಕೆ |
| ಮಕರಂದ | - | ಹೂಗಳ ರಸ, ಮಧು, ಭ್ರಮರ |
| ಮಗ್ಗುಲು | - | ಬಗಲು |
| ಮಧ್ಯವರ್ತಿ | - | ನಡುವಿನಲ್ಲಿರುವವ, ದಲ್ಲಾಳಿ |
| ಮನೋಕ್ಷಿತಿಜ | - | ಮನಸ್ಸು ಎಂಬ ದಿಗಂತ |
| ಮರುಪಾವತಿ | - | ಹಿಂದಿರುಗಿಸುವಿಕೆ |
| ಮಳಲು | - | ಮರಳು |
| ಮಿಂದು | - | ಸ್ನಾನ ಮಾಡಿ |
| ಮುಕ್ತಿ | - | ಮೋಕ್ಷ, ಬಿಡುಗಡೆ |
| ಮುಂಗಾರು | - | ಮಳೆಗಾಲದ ಮೊದಲ ಭಾಗ |
| ಮೃಗಜಲ | - | ಬಿಸಿಲ ಕುದುರೆ |

ಮೇದಿನಿ - ಭೂಮಿ
ಮೇಳ - ಹೊಂದಾಣಿಕೆ
ಮೈಲು - ದೂರದ ಒಂದು ಅಳತೆ
ಮೊನಚು ಕಣ್ಣು - ಚೂಪಾದ ಕಣ್ಣು
ಮೊರೆಯಿಡು - ಕಾಪಾಡುವಂತೆ ಬೊಬ್ಬಿಡು
ಯಾನ - ಪ್ರಯಾಣ
ರೂಢಿ - ಬಳಕೆ
ರೌದ್ರ - ಅತಿಯಾದ ಕ್ರೋಧ
ಲಂಟಾನ - ಸಣ್ಣ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ
ಲಾಸ್ಯ - ಕುಣಿತದ ಒಂದು ಬಗೆ
ವಸಂತ - ಒಂದು ಋತು, ಒಂದು ರಾಗ
ವಾಹಿನಿ - ನದಿ
ವಿಕೋಪ - ಅತಿರೇಕ, ಅನರ್ಥ
ವಿಧವೆ - ಪತಿ ವಿಹೀನೆ, ಗಂಡ ಸತ್ತವಳು
ವಿವೇಚನೆ - ಯಾವುದು ಸರಿ ಯಾವುದು ತಪ್ಪು ಎಂಬುದರ ತೀರ್ಮಾನ
ವೈಷಮ್ಯ - ವೈಮನಸ್ಸು, ವೈರತ್ವ
ವ್ಯವಹಾರ - ವ್ಯಾಪಾರ, ಉದ್ಯೋಗ
ಶರಣು - ನಮಸ್ಕಾರ, ರಕ್ಷಣೆ
ಶರ್ತ - ಶರತ್ತು
ಶಾಂತಿ - ನೆಮ್ಮದಿ, ಸಮಾಧಾನ
ಶಿಥಿಲ - ಕರಗು, ಸಡಿಲ
ಶ್ರೇಣಿ - ಸಾಲು
ಸಂಕೇತ - ಗುರುತು, ಚಿಹ್ನೆ, ಸೂಚನೆ
ಸಂತೃಪ್ತ - ತೃಪ್ತಿಯನ್ನು ಹೊಂದಿದ
ಸಂಪದ - ಸಂಪತ್ತು
ಸಂಭ್ರಮ - ಸಡಗರ
ಸಖಿ - ಗೆಳತಿ
ಸಜ್ಜನ - ಒಳ್ಳೆಯ ಜನ
ಸನಿಕೆ - ಸಲಿಕೆ
ಸನ್ನದ್ಧ - ಸಿದ್ಧತೆಯಿಂದ ಕೂಡಿದ
ಸವಾಲು - ವಿಚಾರಣೆ, ಕೇಳುವಿಕೆ
ಸಾಕ್ಷಿ - ಪ್ರತ್ಯಕ್ಷದರ್ಶಿ
ಸಾರಥಿ - ಗಾಡಿ ಚಲಾಯಿಸುವವನು
ಸಾವಯವ - ಜೈವಿಕ
ಸಿಬಿರು - ಸಲಿಕೆ, ಸಿಗುರು
ಸಿರಿ - ಐಶ್ವರ್ಯ
ಸುತ - ಮಗ
ಸೃಜನಶೀಲ - ಸೃಷ್ಟಿಸುವ ಸಾಮರ್ಥ್ಯವುಳ್ಳ
ಸೆಣಸು - ಕಾದಾಡು
ಸೇನಾನಿ - ಸೈನ್ಯಾಧಿಕಾರಿ
ಸೊನೆ - ಮಾವಿನ ಮಿಡಿಯ ತೊಟ್ಟಿನಿಂದ ಹರಿಯುವ ನೀರ ಬಿಂದು
ಸೊಂಪಾದ - ಹುಲುಸಾದ, ಚೆಲುವಾದ
ಸೋನೆ - ಹನಿ ಮಳೆ
ಸೋಮವಂಶ - ಚಂದ್ರವಂಶ
ಸ್ಮರಣೀಯ - ನೆನಪಲ್ಲಿ ಉಳಿಯತ್ತಕ್ಕ
ಸ್ವಪ್ನ - ಕನಸು
ಸ್ವಾದ - ರುಚಿ, ಸವಿ, ಕಂಪು
ಹಂಗಿಸು - ಮೂದಲಿಸು, ಕೆಣಕು
ಹಗೆ - ವೈರಿ
ಹತೋಟಿ - ನಿಯಂತ್ರಣ
ಹರ್ಷ - ಸಂತಸ
ಹಸನು - ಸಮೃದ್ಧಿ
ಹಾಯಿ - ಗಾಳಿಯ ಅನುಕೂಲತೆಗಾಗಿ ದೋಣಿಯ ನಡುಗಂಬಕ್ಕೆ ಕಟ್ಟುವ ನೌಕಾ ಪಟ - ಹಡಗಿನ ಮೇಲೆ ಹಾರಿಸಿದ ಬಾವುಟ
ಹಿಂಗೋಟು - ದೋಣಿಯ ಹಿಂಭಾಗದ ತುದಿ
ಹಿಮ್ಮೇಳ - ನೃತ್ಯ, ನಾಟಕಗಳಲ್ಲಿ ತೆರೆಯ ಹಿಂಭಾಗದಲ್ಲಿದ್ದು ಹಾಡುವ, ವಾದ್ಯ ನುಡಿಸುವ ಗುಂಪು
ಹುಲುಸು - ಹೆಚ್ಚಳ, ಸಮೃದ್ಧಿ
ಹೊಟ್ಟೆ ಪಾಡು - ಜೀವನೋಪಾಯ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in